ಸನ್ನದರಾಗಿರಲು ಸೂಚಿಸಲಾಗಿದೆ. ವೀರಪ್ಪನ್ ಮತ್ತು ಆತನ ಸಹಚರರನ್ನು ಬಂಧಿಸಲು ಎರಡು ರಾಜ್ಯ ಸರ್ಕಾರಗಳು ಕೈಗೊಳ್ಳಲಿರುವ ಕ್ರಮಗಳಿಗೆ ಭಾರತ ಸರ್ಕಾರ ಮುಂಚೂಣಿಯ ಪಾತ್ರವನ್ನು ವಹಿಸಬೇಕೆಂದು ನಮ್ಮ ಬಯಕೆಯಾಗಿದೆ. ಈ ಸಮಸ್ಯ ಪರಿಹಾರಕ್ಕೆ ಕೇಂದ್ರ ಸರ್ಕಾರ ಈಗಾಗಲೇ ಮುಂದಾಗಿದ್ದು ಅಗತ್ಯ ನೆರವು ನೀಡುವ ಭರವಸೆ ಇತ್ತಿದೆ ಎಂದು ತಿಳಿಸಲು ನಾನು ಹರ್ಷಿಸುತ್ತೇನೆ. ಈ ನೆರವನ್ನು ಬಳಸಿಕೊಳ್ಳಲು ಬೇಕಾದ ಎಲ್ಲಾ ಕ್ರಮಗಳನ್ನು ನಮ್ಮ ಸರ್ಕಾರ ಕೈಗೊಳ್ಳುವುದು. ಆದದ್ದು ಆಗಿ ಹೋಯಿತು. ನಾವಿಂದು ಭವಿಷ್ಯದತ್ತ ದೃಷ್ಟಿ ಹಾಯಿಸಬೇಕಾಗಿದೆ. ಈ ಘಟನೆಯಿಂದ ಸೂಕ್ತ ಪಾಠಗಳನ್ನು ಕಲಿಯಬೇಕಿದೆ. ಸಮಾಜ ಘಾತುಕರು ಮತ್ತು ರಾಷ್ಟ್ರ ವಿರೋಧಿ, ವಿಚ್ಛಿದ್ರಕಾರಿ ಶಕ್ತಿಗಳು ಸಮಾಜದ ಸ್ವಾಸ್ಥ್ಯ ಹಾಗೂ ಸಮತೋಲನಕ್ಕೆ ಧಕ್ಕೆ ತಾರದಂತೆ ಎಚ್ಚರ ವಹಿಸಬೇಕಾಗಿದೆ. ರಾಜ್ಯದ ರಾಜಧಾನಿ ಬೆಂಗಳೂರು ಹಾಗೂ ರಾಜ್ಯದಿಂದಲೇ ಸಮಾಜ ಘಾತುಕರನ್ನು ಹೊರದಬ್ಬುವುದು ನಮ್ಮ ಗುರಿ. ನಮಗೆ ಆ ಇಚ್ಛಾ ಶಕ್ತಿ ಇದೆ. ಹಾಗೂ ಇಂಥ ದುಷ್ಟ ಶಕ್ತಿಗಳನ್ನು ಮಣಿಸುವ ನಿಟ್ಟಿನಲ್ಲಿ ನಮ್ಮೆಲ್ಲಾ ಬಲವನ್ನು ಬಳಸಿ ಯಶಸ್ವಿಯಾಗಿಯೇ ತೀರುತ್ತೇವೆಂದು ಈ ಸಂದರ್ಭದಲ್ಲಿ ಘೋಷಿಸಬಯಸುತ್ತೇನೆ. ಕಡೆಯದಾಗಿ ಡಾ: ರಾಜ್‌ಕುಮಾರ್ ಅವರ ಬಿಡುಗಡೆಯ ಪ್ರಯತ್ನದಲ್ಲಿ ಸರ್ಕಾರದೊಂದಿಗೆ ಸಂಪೂರ್ಣ ಸಹಕರಿಸಿದ ಮಾನ್ಯ ವಿರೋಧ ಪಕ್ಷದ ನಾಯಕರುಗಳು, ಕರ್ನಾಟಕದ ಜನತೆ, ತಮಿಳುನಾಡು ಸರ್ಕಾರ ಮತ್ತು ಕೇಂದ್ರ ಸರ್ಕಾರಗಳಿಗೆ ಮತ್ತೊಮ್ಮೆ ಸರ್ಕಾರದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ."

6. ನಿಯಮ 69ರ ಮೇರೆಗೆ.

(1) ಡಾ: ರಾಜ್‌ಕುಮಾರ್‌ರವರನ್ನು ಅಪಹರಿಸಿ ಬಿಡುಗಡೆಮಾಡಿದ್ದು ಇನ್ನು ಮುಂದೆ ಇಂತಹ ಪ್ರಕರಣಗಳು ನಡೆಯದಂತೆ ಕಾರ್ಯಾಚರಣೆ ಮಾಡಿ ಕಾಡುಗಳ್ಳ ವೀರಪ್ಪನ್‌ನ್ನು ಹಿಡಿಯುವುದರ ಬಗ್ಗೆ ಚರ್ಚೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಇದೀಗತಾನೆ ನೋಡಿದೆವು. ಬಹುಶ: ಈ ಹೇಳಿಕೆಯಲ್ಲಿ ಹೊಸದೇನು ಇಲ್ಲ ಎಂದು ನನಗನಿಸುತ್ತಿದೆ. ಹಿಂದೆ ವೀರಪ್ಪನ್ ಮಾಡಿದಂಥ ಬೇಡಿಕೆಗಳು ಇರಬಹುದು, ಅದಕ್ಕೆ ಉತ್ತರ ಹಿಂದೆ ಎಲ್ಲಾ ನೀಡಿರುವಂಥದ್ದೇ ಆಗಿದೆ. ಇಲ್ಲಿ ಬಹು ಮುಖ್ಯವಾಗಿ ಇವತ್ತು ರಾಜ್‌ಕುಮಾರ್‌ರವರು ಸುರಕ್ಷಿತವಾಗಿ ಬಿಡುಗಡೆಯಾಗಿ ಬಂದಿದ್ದಾರೆ. ಅದಕ್ಕಾಗಿ ಯಾರ್‍ಯಾರು ಪ್ರಯತ್ನ ಮಾಡಿದ್ದಾರೆ, ಯಾರ್‍ಯಾರು ಅದರ ಜೊತೆಗೆ ಆ ಯಶಸ್ಸಿನಲ್ಲಿ ಭಾಗವಹಿಸಿದ್ದಾರೆ, ಅವರಿಗೆ ನಾವು ಅಭಿನಂದನೆಗಳನ್ನು ಹೇಳೋಣ. ಡಾ: ರಾಜ್‌ಕುಮಾರ್ ಬಿಡುಗಡೆಯಾಗುವವರೆಗೂ ಒಂದು ಘಟ್ಟ. ಬಿಡುಗಡೆಯಾದ ಮೇಲೆ ಮತ್ತೊಂದು ಘಟ್ಟ. ಬಿಡುಗಡೆಯಾಗುವ ಮುಂಚೆ ರಾಜ್ಯದಲ್ಲಿ ಯಾವ ರೀತಿಯ ಒಂದು

ವಾತಾವರಣ ಇತ್ತು, ಮತ್ತು ಪ್ರತಿಯೊಂದು ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸರ್ವ ಪಕ್ಷಗಳ ಒಂದು ಸಭೆಯನ್ನು ಕರೆದ ಪ್ರತಿಯಒಂದು ಹಂತದಲ್ಲಿ ನಾವು ಸಹಕಾರವನ್ನು ಮತ್ತು ರಚನಾತ್ಮಕ ಬೆಂಬಲವನ್ನು ಕೊಟ್ಟುಕೊಂಡು ಬಂದಿದ್ದೇವೆ. ಏಕೆಂದರೆ ಡಾ: ರಾಜ್ ಕುಮಾರ್ ಸುರಕ್ಷಿತವಾಗಿ ಬಿಡುಗಡೆ ಯಾಗಬೇಕೆನ್ನುವಂಥದ್ದು, ಆ ಒಂದು ಹಂತ ಮುಗಿದಿದೆ. ಡಾ: ರಾಜ್‌ಕುಮಾರ್‌ರವರು ಬಿಡುಗಡೆಯಾಗಿ ಬಂದಿದ್ದಾರೆ. ಅದು ಹೇಗೆ ಬಿಡುಗಡೆಯಾಗಿ ಬಂದರೋ, ಯಾವ ಬೇಡಿಕೆಗಳನ್ನು ಈಡೇರಿಸಲಾಯಿತು, ಇವೆಲ್ಲಾ ಒಂದು ಹಂತದ್ದು. ಆದರೆ ಇದರ ನಂತರ ಬೆಳವಣಿಗೆಗಳು ದಿನನಿತ್ಯ ಏನಾಗಿದೆಯೆಂದರೆ ದಿನನಿತ್ಯ ಪತ್ರಿಕೆಗಳಲ್ಲಿ ಒಂದೊಂದು ರೀತಿಯ ಹೇಳಿಕೆಗಳು ಬರುತ್ತಿವೆ. ಇವತ್ತು ಏನಾಗಿದೆ ಎಂದರೆ ಜೋರಾಗಿ ಮಳೆ ಬರುತ್ತದೆ ಮಳೆ ನಿಂತಮೇಲೆ ಮರದಿಂದ ಆ ಮಳೆ ಹನಿ ಉದುರುತ್ತದಲ್ಲಾ, ಹಾಗೆ ಮಳೆ ನಿಂತುಹೋದರೂ ಆ ಮಳೆ ಹನಿಗಳು ಉದುರುವ ರೀತಿ ಇವತ್ತು ಒಂದೊಂದು ಪ್ರಶ್ನೆಗಳು ಏಳುತ್ತಾ ಇವೆ. ಡಾ: ರಾಜ್‌ಕುಮಾರ್‌ರವರನ್ನು ಬಿಡುಗಡೆ ಮಾಡಿಸಬೇಕಾದ ಗುರುತರವಾದ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲೆ ಇರಬಹುದು, ಕೇಂದ್ರ ಸರ್ಕಾರದ ಮೇಲೆ ಇರಬಹುದು, ತಮಿಳುನಾಡು ಸರ್ಕಾರದ ಮೇಲೆ ಇರಬಹುದು, ಆಷ್ಟೇ ಜವಾಬ್ದಾರಿ ಇನ್ನು ಮುಂದೆಯೂ ಇದೆ. ಡಾ: ರಾಜ್‌ಕುಮಾರ್ ಅಪಹರಣವಾಗಲಿಕ್ಕೆ ಕಾರಣಗಳೇನು ಎನ್ನುವ ಬಗ್ಗೆ ಅದರ ಬಗ್ಗೆಯೂ ನೀವು ಚಿಂತನೆ ಮಾಡಬೇಕಾಗುತ್ತದೆ. ಏಕೆಂದರೆ ಇದು ಇವತ್ತಿನ ಮಾತಲ್ಲ. ಕಳೆದ ಹತ್ತು ವರ್ಷಗಳಿಂದ ವೀರಪ್ಪನ್ ಹಾವಳಿ ನಡೆಯುತ್ತಿದೆ. ಅದರಲ್ಲಿ ಸಫರ್ ಆದಂಥವರು ಹೆಚ್ಚು ಕಡಿಮೆ ನಮ್ಮ ಕರ್ನಾಟಕ ರಾಜ್ಯದವರು. ನಮ್ಮ ಅಧಿಕಾರಿಗಳಾಗಿರಬಹುದು, ಕಾನ್ಸ್‌ಬಲ್ಸ್ ಇರಬಹುದು, ಇನ್ನಿತರ ಸಾರ್ವಜನಿಕ ಪ್ರಮುಖ ವ್ಯಕ್ತಿಗಳಿರಬಹುದು, ಹೆಚ್ಚುಕಡಿಮೆ ನೂರಕ್ಕೆ 90ರಷ್ಟು ನಮ್ಮ ಕರ್ನಾಟಕ ರಾಜ್ಯದ ಜನ ವೀರಪ್ಪನ್ನನಿಂದ ಸಫರ್ ಆಗಿದ್ದಾರೆ. ನೂರಾರು ಜನ ಹತ್ಯೆಯಾಗಿದ್ದಾರೆ. ಸಾವಿರಾರು ಆನೆಗಳನ್ನು ಕೊಂದಿದ್ದಾನೆ. ಈ ರೀತಿ ವಿಚಿತ್ರವಾದಂಥ ಮತ್ತು ಹಿಂಸಾತ್ಮಕ ಕಾರ್ಯಚಟುವಟಿಕೆಗಳನ್ನು ಮಾಡಿದಂಥ ವೀರಪ್ಪನ್ ಕರ್ನಾಟಕಕ್ಕೆ ತೊಂದರೆ ಕೊಟ್ಟಷ್ಟು ಯಾವ ರಾಜ್ಯಕ್ಕೂ ಕೊಟ್ಟಿಲ್ಲ. ಹೀಗಾಗಿ ನಮ್ಮ ಪ್ರೈಯಾರಿಟಿ ವೀರಪ್ಪನನ್ನು ಅರೆಸ್ಟ್ ಮಾಡುವಂಥಾದ್ದು. ಅವನನ್ನು ಶಿಕ್ಷೆಗೆ ಗುರಿಪಡಿಸುವುದು ಅದಕ್ಕೆ ನಮ್ಮ ಪ್ರೈಯಾರಿಟಿ ಇರಬೇಕು. ಇದರ ಬಗ್ಗೆ ಹೆಚ್ಚು ಒತ್ತನ್ನು ನಾವು ಕೊಡಬೇಕಾದೆ. ಹಿಂದೆ ಬಹುಶ: ಹಲವಾರು ಪ್ರಮುಖ ವ್ಯಕ್ತಿಗಳನ್ನು ವೀರಪ್ಪನ್ ಅಪಹರಣ ಮಾಡಿದ ಸಂದರ್ಭದಲ್ಲಿ ಆಗ ಎಷ್ಟೊಂದು ಗಂಭೀರತೆ ಇತ್ತು, ಡಾ: ರಾಜ್‌ಕುಮಾರ್ ಅಪಹರಣವಾದಂಥ ಸಂದರ್ಭದಲ್ಲಿ ಇವತ್ತು ಎಲ್ಲಾ ಒಂದೊಂದೇ ವಿಷಯಗಳು ಹೊರಗೆ ಬರುತ್ತಾ ಇವೆ. ಒಬ್ಬ ಪ್ರಮುಖ ವ್ಯಕ್ತಿ ಕರ್ನಾಟಕದ ಮೇರು ನಟ, ಕರ್ನಾಟಕದ ಜೀವನಾಡಿ ಡಾ: ರಾಜ್‌ಕುಮಾರ್‌ರವರು ಅಪಹರಣವಾದ ಸಂದರ್ಭದಲ್ಲಿ ಇಡೀ ಕರ್ನಾಟಕ ಜನತೆ ಅವರ ಸಲುವಾಗಿ ಮರುಕಪಟ್ಟಿತು, ಕನಿಕರಪಟ್ಟಿತು, ಕಳವಳವನ್ನು ವ್ಯಕ್ತಪಡಿಸಿತು. ಅದೇ ಸಂದರ್ಭದಲ್ಲಿ

ರಾಜ್ಯ ಸರ್ಕಾರಗಳು ಇದರ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡುವುದು ಪ್ರಾರಂಭವಾಯಿತು. ಆದರ ಹಿನ್ನಲೆ ಏನು ಎನ್ನುವಂಥಾದ್ದು. ಮಾನ್ಯ ಮುಖ್ಯಮಂತ್ರಿಗಳು ಒಂದು ವಿಷಯವನ್ನು ಪ್ರಸ್ತಾಪಮಾಡಿದರು. ಡಾ: ರಾಜ್‌ಕುಮಾರ್‌ರವರು ಬಹಳ ಸರಳ ವ್ಯಕ್ತಿ, ಹೀಗಾಗಿ ಅವರು ಗಾಜನೂರಿಗೆ ಹೋಗುವಾ ಸಂದರ್ಭದಲ್ಲಿ ಅವರು ರಕ್ಷಣೆಯನ್ನು ಕೇಳಲಿಲ್ಲ ಎನ್ನುವಂಥಾದ್ದು. ನಿಜವಾಗಿ ಡಾ: ರಾಜ್‌ಕುಮಾರ್ ಸರಳ ವ್ಯಕ್ತಿ; ಸಜ್ಜನ ಅವರಿಗೆ ಅನಿಸಿರಬಹುದು, ನಮಗೆ ಯಾವುದೇ ಒಂದು ರಕ್ಷಣೆ ಬೇಕಾಗಿಲ್ಲ. ನಾನು ಜನರ ಮಧ್ಯದಲ್ಲಿ ಇರುವಂಥ ವ್ಯಕ್ತಿ. ಆದರೆ ಯಾವ ಒಬ್ಬ ಹಿರಿಯ ಅಧಿಕಾರಿ ಅರಕೇಶ್ ಎನ್ನುವಂಥವರು ಒಂದು ವರದಿಯನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದರು. ಅವರು ಆ ಕಾರ್ಯಪಡೆಯಲ್ಲಿ ಕೆಲಸ ಮಾಡಿದಂಥವರು ಅರಕೇಶ್ ಎಂಬುವವರು ವೀರಪ್ಪನ್ ಹಿಟ್ ಲಿಸ್ಟ್‌ನಲ್ಲಿ ಡಾ: ರಾಜ್‌ಕುಮಾರ್ ಒಬ್ಬರಿದ್ದಾರೆ ಅವರಿಗೆ ಎಲ್ಲಾ ರೀತಿಯ ಒಂದು ರಕ್ಷಣೆಯನ್ನು ಕೊಡಬೇಕೆನ್ನುವ ವರದಿಯನ್ನು ಕೊಟ್ಟಿದ್ದರು. ಆ ಅರಕೇಶ್‌ರವರ ರಿಪೋರ್ಟ್ ಸರ್ಕಾರದ ವಶದಲ್ಲಿದೆ. ಈ ರೀತಿ ವರದಿ ಇರುವ ಸಂದರ್ಭದಲ್ಲಿ ಬಹುಶ: ಡಾ: ರಾಜ್‌ಕುಮಾರ್‌ರವರು ರಕ್ಷಣೆ ಬೇಡ ಎಂದರೂ ಅವರ ಚಲನವಲನಗಳ ಬಗ್ಗೆ ಗಮನವಿಟ್ಟು ಅವರಿಗೆ ರಕ್ಷಣೆಯನ್ನು ಒದಗಿಸಿದ್ದರೆ ಅಥವಾ ಅವರು ಗಾಜನೂರಿಗೆ ಹೋಗುವ ಸಂದರ್ಭದಲ್ಲಿ ರಕ್ಷಣೆಯನ್ನು ಒದಗಿಸಿದ್ದರೆ ಬಹುಶ: ಕಳೆದ ಮೂರು ತಿಂಗಳಿಂದ ನೂರೆಂಟು ದಿವಸಗಳವರೆಗೆ ಕರ್ನಾಟಕದಲ್ಲಿ ಯಾವ ರೀತಿ ಒಂದು ಆತಂಕದ ವಾತಾವರಣ ನಿರ್ಮಾಣವಾಯಿತೋ ಡಾ: ರಾಜ್‌ಕುಮಾರ್ ಅಪಹರಣವಾದ ನಂತರ ಆ ವಾತಾವರಣ ಆಗಲಿಕಿರಲಿಲ್ಲ. ಬಹುಶ: ಡಾ: ರಾಜ್‌ಕುಮಾರ್‌ರವರ ಅಪಹರಣವಾಗಲಿಕ್ಕೂ ಸಾಧ್ಯವಿರಲಿಲ್ಲ. ಹೀಗಾಗಿ ಇವತ್ತು ಒಂದೊಂದೇ ಲ್ಯಾಪ್ಸಸ್ ನಮ್ಮ ಕಣ್ಣಮುಂದೆ ಬರುತ್ತಿವೆ. ಅದು ಒಂದು ಹಂತ. ಹೊಸದಾಗಿ ಎಸ್.ಎಂ. ಕೃಷ್ಣರವರು ಈ ರಾಜ್ಯದ ಮುಖ್ಯಮಂತ್ರಿಗಳಾದ ಮೇಲೆ ಇದರ ಬಗ್ಗೆ ಹೆಚ್ಚು ಗಮನ ಹರಿಸಿಲ್ಲವೋ ಏನೋ ಎಂದು ನನಗೊಂದು ಕೊರಗು ಇದೆ. ಅವರು ಎಲ್ಲೋ ಒಂದು ಕಡೆಯಲ್ಲಿ ಸಂದರ್ಶನದಲ್ಲಿ ಅವರು ಅಂದಿದ್ದರು. ಒಂದು ಸಲ 'ಆಪ್ ಕಿ ಅದಾಲತ್' ಎನ್ನುವ ಇಂಟರ್‌ವ್ಯೂನಲ್ಲಿ ಮಾನ್ಯ ಎಸ್.ಎಂ. ಕೃಷ್ಣ ಅವರು ಒಪ್ಪಿಕೊಂಡಿದ್ದರು. ಹೌದು ನಾನು ಬೇರೆ ಬೇರೆ ಒಂದು ರಾಜ್ಯದ ಅಭಿವೃದ್ಧಿಯ ಚಟುವಟಿಕೆಯ ಸಂದರ್ಭದಲ್ಲಿ ಇದಕ್ಕೆ ನಾನು ಹೆಚ್ಚು ಲಕ್ಷ ವಹಿಸಿಲ್ಲ ಎನ್ನುವುದನ್ನು ಅವರು ಒಂದು ಕಡೆ ಒಪ್ಪಿಕೊಂಡಿದ್ದರು. ಬಹುಶ: ಇದು ಎಲ್ಲಾ ಕಾರಣವಿರಬಹುದು. ಕಳೆದ ಹತ್ತು ವರ್ಷ ಹಿಂದಿನ ಸರ್ಕಾರವಿರಬಹುದು, ಮುಂದಿನ ಸರ್ಕಾರವಿರಬಹುದು, ಯಾವುದೇ ಸರ್ಕಾರಗಳಿರಬಹುದು. ಏಕೆಂದರೆ ಸುಪ್ರೀಂ ಕೋರ್ಟ್‌ನವರು ಇದರ ಬಗ್ಗೆ ಬಹಳಷ್ಟು ಅಬ್ಸರ್ವೇಷನ್ಸ್‌ನ್ನು ಎರಡೂ ಸರ್ಕಾರಗಳ ಮೇಲೆ ಮಾಡಿದ್ದಾರೆ. ತಮಿಳುನಾಡು ಸರ್ಕಾರ, ಅಥವಾ ನಮ್ಮ ರಾಜ್ಯ ಸರ್ಕಾರ ಇರಬಹುದು; ಎರಡೂ ಸರ್ಕಾರಗಳ ಮೇಲೆ ಅಬ್ಸರ್ವೇಷನ್ಸ್ ಮಾಡಿದ್ದಾರೆ. ಇವತ್ತು ಯಾವುದೇ ಸರ್ಕಾರ ಇರಬಹುದು, ಹಿಂದಿನ

ಸರ್ಕಾರ ಯಾವುದೇ ಇರಬಹುದು, ಅದು ಕಾಂಗ್ರೆಸ್ ಸರ್ಕಾರ ಇರಬಹುದು, ಜನತಾ ದಳ ಸರ್ಕಾರ ಇರಬಹುದು ಅಥವಾ ಮತ್ತೊಂದು ಸರ್ಕಾರ ಇರಬಹುದು. ಎಲ್ಲಿ ಲ್ಯಾಪ್ಸಸ್ ಆಗಿವೆ ಎನ್ನುವಂತಹದನ್ನು ಸುಪ್ರೀಂ ಕೋರ್ಟ್ ಎತ್ತಿ ತೋರಿಸಿದೆ. ಹೀಗಾಗಿ ಕಳೆದ ಹತ್ತು ವರ್ಷಗಳಿಂದ ನಡೆದಿರುವಂತಹ ಘಟನಾವಳಿಗಳನ್ನು ನೋಡಿದ ಮೇಲೆ ಬಹುಶ: ನಾವು ಎಚ್ಚರ ಆಗಬೇಕಾಗಿತ್ತು. ರಾಜ್ಯ ಸರ್ಕಾರ ಎಚ್ಚರ ಆಗಬೇಕಾಗಿತ್ತು. ಆ ಎಚ್ಚರವನ್ನು ಮಹಿಸದೇ ಇದ್ದುದರಿಂದ ಇವತ್ತು ಡಾ: ರಾಜ್‌ಕುಮಾರ್‌ಅವರ ಅಪಹರಣ ಆಯಿತು. ಸರ್ಕಾರದ ಕಡೆಯಿಂದ ಸಾಕಷ್ಟು ಲ್ಯಾಪ್ಸಸ್ ಆಗಿವೆ. ಅದರ ಬಗ್ಗೆ ಚಿಂತನೆ ಆಗಬೇಕು. ವೀರಪ್ಪನ್ ಅವನನ್ನು ಯಾವ ರೀತಿ ಬಂಧನ ಮಾಡಬೇಕು? ಯಾವ ರೀತಿ ಕಾರ್ಯಾಚರಣೆ ಮಾಡಬೇಕು ಎಂಬ ಬಗ್ಗೆ ಚಿಂತನೆ ಇವತ್ತು ಆಗಬೇಕು. ಹಿಂದಿನ ನಾವು ಏನು ತಪ್ಪು ಮಾಡಿದ್ದೇವೆ, ಅದರಿಂದ ಪಾಠ ಕಲಿಯುವಂತಹದು ಆಗಬೇಕು. ಇದೇ ಘಟನಾವಳಿಗಳು ಪುನರಾವರ್ತನೆ ಆಗಬಾರದು. ಮತ್ತೆ ಡಾ: ರಾಜ್‌ಕುಮಾರ್ ಅವರಂತಹ ಇನ್ನೊಬ್ಬ ಪ್ರಮುಖ ವ್ಯಕ್ತಿಯ ಅಪಹರಣ ಆಗುವಂತಹ ಕೆಲಸ ಈ ರಾಜ್ಯದಲ್ಲಿ ಆಗಬಾರದು. ಭಯೋತ್ಪಾದಕರಿಗೆ, ಉಗ್ರಗಾಮಿಗಳಿಗೆ ಬೆಂಗಳೂರು ತಾಣ ಆಗಬಾರದು. ಆ ಚಟುವಟಿಕೆಗಳಿಗೆ ಒಂದು ಕೇಂದ್ರ ಸ್ಥಾನ ಇಲ್ಲಿ ಆಗಬಾರದು. ಇವತ್ತಿನ ಘಟನಾವಳಿಗಳನ್ನು ಬಹುಶ: ನೋಡಿದರೆ ಬೆಂಗಳೂರು ಎಲ್ಲಿ ಉಗ್ರಗಾಮಿಗಳ, ಕ್ರಿಮಿನಲ್ಸ್‌ಗಳ ಸ್ವರ್ಗ ಆಗುತ್ತದೇನೋ ಎಂಬ ಅನುಮಾನ ನನಗೆ ಬರುತ್ತಿದೆ. ಬಹುಶ: ಸೆಪ್ಟೆಂಬರ್ ತಿಂಗಳಿನಲ್ಲಿ ನಡೆದಂತಹ ಕೊಲೆಗಳನ್ನು ನೋಡಿದರೆ, ಒಂದೇ ತಿಂಗಳಲ್ಲಿ ಬೆಂಗಳೂರು ನಗರದಲ್ಲಿ 32 ಕೊಲೆಗಳು ಆಗಿವೆ. ಹಿರಿಯ ಪತ್ರಕರ್ತ ಕೆ. ಶಾಮರಾವ್ ಅವರ ಮನೆ ದರೋಡೆ ಸಹ ಆಯಿತು. ಇಂತಹ ನೂರಾರು ದರೋಡೆಗಳು ಇವತ್ತು ಆಗುತ್ತಿವೆ. ಇದುವರೆಗೂ ಟ್ರೇಸ್‌ಔಟ್ ಮಾಡುವುದಕ್ಕೆ ಆಗುತ್ತಿಲ್ಲ. ಇಡಿ ರಾಜ್ಯದ ವಿಚಾರ ಅದು ಬೇರೆ ಮಾತು. ನಾವು ಬೆಂಗಳೂರನ್ನು ಕಾನ್‌ಸೆಂಟ್ರೇಷನ್ ಮಾಡಿದರೆ ಈ ಕ್ರಿಮಿನಲ್ಸ್ ಏನು ಅಫೆನ್ಸ್ ಮಾಡುತ್ತಿದ್ದಾರೆ, ಬಹುಶ: ಇದರ ಹೆಚ್ಚಳವನ್ನು ನೋಡಿದರೆ ಈ ಬೆಂಗಳೂರು ಆ ಕ್ರಿಮಿನಲ್ಸ್‌ಗಳ ಸ್ವರ್ಗ ಆಗುತ್ತದೇನೋ ಎನ್ನುವ ಭಾವನೆ ಜನರಲ್ಲಿ ಮೂಡುತ್ತಿದೆ. ಅಸಂಗತವಾದ ವಾತಾವರಣ ಇವತ್ತು ನಿರ್ಮಾಣ ಆಗುತ್ತಿದೆ. ಹೀಗಾಗಿ ಡಾ: ರಾಜ್‌ಕುಮಾರ್ ಅವರ ಬಂಧನ, ನಂತರ ಬಿಡುಗಡೆ, ಈ ಎರಡೂ ವಿಚಾರಗಳನ್ನು ನಾವು ನೋಡುತ್ತಾ ಡಾ: ರಾಜ್‌ಕುಮಾರ್ ಅವರ ಬಿಡುಗಡೆ ಮಾಡುವುದಕ್ಕೆ ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ ಸಂಧಾನ ಮಾರ್ಗಗಳನ್ನು ಅನುಕರಣೆ ಮಾಡಿದರು. ಅದರ ಬಗ್ಗೆ ನಮ್ಮ ಬೆಂಬಲವೂ ಇತ್ತು. ಪ್ರತಿಪಕ್ಷದವರನ್ನೂ ಕನ್ಸಲ್‌ಟೇಷನ್ ಮಾಡಿದಾಗ ಸಂಧಾನ ಮಾರ್ಗ ಅಡ್ಡಿ ಇಲ್ಲ ಎಂದು ಹೇಳಿದೆವು. ಆದರೆ ಸಂಧಾನ ಮಾರ್ಗಕ್ಕೆ ಹೋಗುವವರು ಯಾರು? ಗೋಪಾಲ್ ಎಂಬ ಒಬ್ಬ ವ್ಯಕ್ತಿ. ಗೋಪಾಲ್ ಮತ್ತು ಇನ್ನಿತರ ಕೆಲವೊಂದು ಜನ ಅವರ ಜೊತೆ ನಂತರ ಸೇರಿದರು. ಇಲ್ಲಿ ನಮ್ಮ ರಾಜ್ಯ ಸರ್ಕಾರ ಅಫಿಷಿಯಲ್ ಸಿಗ್ನಲ್ ಕೊಟ್ಟಿದ್ದು ಶ್ರೀ ಗೋಪಾಲ್ ಅವರಿಗೆ ಪ್ರೊಫೆಸರ್ ಕಲ್ಯಾಣ್, ಶ್ರೀ ಜಿ. ಸುಕುಮಾರನ್ ಎನ್ನುವಂತಹ ಮೂರು ಜನ ವ್ಯಕ್ತಿಗಳಿಗೆ ಅಧಿಕೃತವಾಗಿ ಸಂಧಾನ ಮಾರ್ಗಕ್ಕೆ ಹೋಗಲಿಕ್ಕೆ ಅವಕಾಶ ಕೊಟ್ಟಿದ್ದು, ಹಾಗಾದರೆ ಇನ್ನಿತರ ಜನ, ಇನ್ನಿತರ ವ್ಯಕ್ತಿಗಳು ಯಾರು ಆ ಸಂಧಾನಕ್ಕೆ

ಹೋದರು? ಶ್ರೀ ನೆಡುಮಾರನ್ ಎನ್ನುವ ವ್ಯಕ್ತಿ ಯಾರು? ಅವರ ಹಿನ್ನಲೆ ಏನು? ಅದರ ಬಗ್ಗೆ ಇವತ್ತು ಹೊರಗಡೆ ಸಾಕಷ್ಟು ಚರ್ಚೆ ಆಗುತ್ತಿದೆ. ಶ್ರೀಮತಿ ಸೋನಿಯಾ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು. ಅವರೂ ಸಹ ಶ್ರೀ ನೆಡುಮಾರನ್ ಅವರು ಎಲ್‌ಟಿಟಿಇ ಬಗ್ಗೆ ಒಲವಿರುವ ವ್ಯಕ್ತಿಯೆಂದು ಒಂದು ಕಡೆ ಟೀಕೆ ಮಾಡಿದ್ದು ನಾನು ನೋಡಿದ್ದೇನೆ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಹೀಗಾಗಿ ಇವತ್ತು ಶ್ರೀ ನೆಡುಮಾರನ್ ಬಗ್ಗೆ ವಿವಾದ ಇದ್ದಂತಹ ಸಂದರ್ಭದಲ್ಲಿ ಅಂತಹವರನ್ನು ಸಂಧಾನಕ್ಕೆ ಕಳಿಸಿದ್ದೀರಿ. ನಾವು ನೆಡುಮಾರನ್ ಅವರನ್ನು ಕಳುಹಿಸಿದಂತಹ ಸಂದರ್ಭದಲ್ಲಿ ಡಾ: ರಾಜ್‌ಕುಮಾರ್ ಅವರು ಸುರಕ್ಷಿತವಾಗಿ ಬಿಡುಗಡೆ ಆದಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ಸಹ ಪರೋಕ್ಷವಾಗಿ ನೆಡುಮಾರನ್ ಅವರಿಗೆ ಒಪ್ಪಿಗೆ ಕೊಟ್ಟಿತ್ತು. ಅವರ ಜೊತೆ ನೇರವಾಗಿ ಡೀಲ್ ಮಾಡದೇ ಇದ್ದರೂ ಶ್ರೀ ಕರುಣಾನಿಧಿ ಅವರು ಅವರ ಜೊತೆ ಮಾತನಾಡಿದ ಸಂದರ್ಭದಲ್ಲಿ ನೆಡುಮಾರನ್ ಅವರು ಸಂಧಾನಕ್ಕೆ ಹೋದರು. ಅವರ ಜೊತೆಗೆ ನೆಡುಮಾರನ್ ಸಂಧಾನಕ್ಕೆ ಹೋಗುವಂತಹದು, ಅಲ್ಲಿ ಮಾತನಾಡಿದಂತಹ ವಿಚಾರ ಇದೀ ಜಗತ್ತಿಗೆ ಗೊತ್ತಾಗಿರಬಹುದು ಆದರೆ ಇದರ ಜೊತೆಗೆ ನಮ್ಮಲ್ಲಿರುವಂತಹ ಕೆಲವು ವ್ಯಕ್ತಿಗಳು ಡಾ: ಭಾನು ಇರಬಹುದು, ಆಮೇಲೆ ಶ್ರೀ ರಾಮ್‌ಕುಮಾರ್ ಇರಬಹುದು; ಇನ್ನೊಬ್ಬರು ಪಣ್ಣುಗ ಸುಂದರಂ ಅವರು ಇರಬಹುದು. ಇವರೂ ಸಹ ಸಂಧಾನ ಮಾರ್ಗಕ್ಕೆ ಹೋದರು. ಇವರು ಸಂಧಾನಕ್ಕೆ ಹೋಗುವಂತಹದು ಸರ್ಕಾರಕ್ಕೆ ಆ ವಿಷಯ ಗೊತ್ತಿತ್ತೋ ಹೇಗೆ ಎಂಬ ವಿಚಾರವನ್ನು ಇವತ್ತು ಹೇಳಬೇಕಾಗುತ್ತದೆ. ಏಕೆಂದರೆ ಇವತ್ತು ಎಲ್ಲವೂ ಸುಖಾಂತ್ಯ ಆಗಿದೆ. ಡಾ: ರಾಜ್ ಕುಮಾರ್ ಅವರು ಸುರಕ್ಷಿತವಾಗಿ ಬಂದಿದ್ದಾರೆ. ಇವತ್ತು ಎಷ್ಟೋ ಜನ ಸ್ಟೇಟ್‌ಮೆಂಟ್ ಕೊಟ್ಟರು, ನಾವು ಹೋಗುತ್ತೇವೆ, ನಾವು ಹೋಗುತ್ತೇವೆಂದು ಹೇಳಿದರು. ಸರ್ಕಾರ ಕೆಲವರನ್ನು ಬಂಧನದಲ್ಲಿಯೂ ಇಟ್ಟಿತು. ಆದರೆ, ಇವರು ಯಾರಿಗೂ ಗೊತ್ತಾಗದ ರೀತಿಯಲ್ಲಿ ಈ ಮೂರು ಜನ ನೆಡುಮಾರನ್ ಅವರ ಸಹಾಯದೊಂದಿಗೆ ಕಾಡಿಗೆ ಹೋದರು. ನೆಡುಮಾರನ್ ಅವರು ಬರಲಿಕ್ಕೆ ಹೇಳಿದರು, ಅದಕ್ಕೆ ನಾವು ಹೋದೆವು ಎನ್ನುವ ಸ್ಟೇಟ್‌ಮೆಂಟ್ ಇವತ್ತು ಬರುತ್ತಿದೆ. ಹಾಗಾದರೆ ಈ ಮೂರು ಜನ ಅನ್‌ಅಫಿಷಿಯಲ್ ಆಗಿ ಸರ್ಕಾರಕ್ಕೂ ಗೊತ್ತಿಲ್ಲದೆ ಇರುವ ರೀತಿಯಲ್ಲಿ ಹೋಗಿದ್ದಾರೆ. ಹೋಗಿ ಬಂದು ಡಾ: ರಾಜ್‌ಕುಮಾರ್ ಅವರನ್ನು ಕರೆದುಕೊಂಡು ಬಂದರು; ಒಳ್ಳೆಯದು, ಶಹಭಾಸ್‌ಗಿರಿ ಕೊಡೋಣ. ಆದರೆ ಅವರ ಹಿನ್ನಲೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತೆ. ಏಕೆಂದರೆ ಪಣ್ಣುಗ ಸುಂದರಂ ಯಾರು? ನಮ್ಮ ರಾಷ್ಟ್ರೀಯ ನಾಯಕರಾದಂತಹ ದಿ. ರಾಜೀವ್ ಗಾಂಧಿಯವರ ಒಂದು ಹತ್ಯೆಯಲ್ಲಿ ಯಾರು ಪ್ರಮುಖ ಆರೋಪಿಗಳಾದ ಶಿವರಾಸನ್ ಮತ್ತು ಶುಭಾ ಇವರಿಗೆ ಸಹಾಯ ಮಾಡಿದಂತಹ ವ್ಯಕ್ತಿ, ಸಂಪರ್ಕ ಇದ್ದಂತಹ ವ್ಯಕ್ತಿ ಪಣ್ಣುಗ ಸುಂದರಂ ಮತ್ತು ಮಣಿ ಅವರು ಇವತ್ತು ಡಾ: ಭಾನು ಮತ್ತು ರಾಮ್‌ಕುಮಾರ್ ಅವರ ಜೊತೆ ಸಂಪರ್ಕ ಇಟ್ಟುಕೊಂಡು ಅವರೆಲ್ಲಾ ಪ್ರಯತ್ನ ಮಾಡಿದ್ದಾರೆ ಎನ್ನುವಂತಹ ಈ ಹಿನ್ನೆಲೆಯನ್ನು ನಾವು ಇವತ್ತು ಚಿಂತನೆ ಮಾಡಬೇಕಾಗುತ್ತದೆ. ನಾವು ಇದರ ಕಾನ್ಸಿಕ್ವೆನ್ಸ್ ಮತ್ತು ಸಬ್‌ಸೀಕ್ವೆಂಟ್ ಕಾನ್ಸಿಕ್ವೆನ್ಸ್ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಅಕಸ್ಮಾತ್ ಇವರೆಲ್ಲಾ ಹೋದಂತಹ

ಸಂದರ್ಭದಲ್ಲಿ ಡಾ: ರಾಜ್‌ಕುಮಾರ್ ಅವರಿಗೆ ಏನಾದರೂ ಅನಾಹುತ ಆಗಿದ್ದರೆ ಹೇಗೆ? ಏಕೆಂದರೆ ಇವರೆಲ್ಲಾ ಸರ್ಕಾರದ ಅನುಮತಿ ತೆಗೆದುಕೊಂಡು ಹೋಗಿರಲಿಲ್ಲ. ಸರ್ಕಾರ ಅವರಿಗೆ ಕಾಡಿಗೆ ಹೋಗಲಿಕ್ಕೆ ಸಿಗ್ನಲ್ ಕೊಟ್ಟಿರಲಿಲ್ಲ. ಅವರು ಹಾಗೆ ಹೋದಂತಹ ಸಂದರ್ಭದಲ್ಲಿ ಏನಾದರೂ ಅನಾಹುತ ಆಗಿದ್ದರೆ ಅದಕ್ಕೆ ಯಾರು ಜವಾಬ್ದಾರಿ ಆಗುತ್ತಿದ್ದರು? ಹೀಗಾಗಿ ನಾವು ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಇವತ್ತು ಪ್ರತಿ ಒಂದು ಹಂತದಲ್ಲಿ ಹಲವಾರು ಸ್ಟೇಟ್‌ಮೆಂಟನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಇವತ್ತು ಹಿರಿಯ ಅಧಿಕಾರಿಗಳು ಪತ್ರಿಕೆಗಳಲ್ಲಿ ಕೆಲವೊಂದು ಸ್ಟೇಟ್‌ಮೆಂಟ್‌ನ್ನು ಕೊಡುತ್ತಿದ್ದಾರೆ. ಮತ್ತು ಮಾಜಿ ಮಂತ್ರಿಗಳು ಕೆಲವೊಂದು ಸ್ಟೇಟ್‌ಮೆಂಟುಗಳನ್ನು ಕೊಡುತ್ತಿದ್ದಾರೆ. ಹೀಗಾಗಿ ಇಲ್ಲಿ ಪ್ರಮುಖವಾಗಿ ಡಾ: ಭಾನು ಅವರ ಬಗ್ಗೆ ದಿನನಿತ್ಯ ಪತ್ರಿಕೆಯಲ್ಲಿ ಬರುತ್ತಿದೆ. ಒಂದು ಸಲ ಅವರು ಪ್ರೆಸ್ ಕಾನ್‌ಫೆರೆನ್ಸ್ ಕಾಲ್ ಮಾಡಿದ್ದರು. ಕೊನೆಯ ಮೂವ್‌ಮೆಂಟ್‌ನಲ್ಲಿ ಕ್ಯಾನ್ಸಲ್ ಮಾಡಿದರು. ಏಕೆ ಪತ್ರಿಕಾ ಸಮ್ಮೇಳನವನ್ನು ಕ್ಯಾನ್ಸಲ್ ಮಾಡಿದರು? ಅಕೆಯ ಬಗ್ಗೆ ಗ್ರಾನೈಟ್ ಲಾಬಿ ಇದೆ ಎನ್ನುವಂತಹದು ಇದೆ. ರಾಮಕುಮಾರ್ ವ್ಯಕ್ತಿ ಮೇಲೆ ಗ್ರಾನೈಟ್ ಲಾಬಿ ಇದೆ ಎನ್ನುವಂತಹದು ಇದೆ. ಇಲ್ಲಿ ಗ್ರಾನೈಟ್ ಲಾಬಿಯ ಪ್ರಶ್ನೆ ಏಕೆ ಬರುತ್ತದೆ ಎಂದರೆ, ವೀರಪ್ಪನ್ ಇಲ್ಲಿಯವರೆಗೆ ಬೆಳೆಯಲಿಕ್ಕೆ ಈ ಗ್ರಾನೈಟ್ ಲಾಬಿ ಸಹಾಯ ಮಾಡಿದೆ ಎನ್ನುವಂತಹ ಮುಖ್ಯ ಅಪಾದನೆ ಇದೆ. ಹಿಂದೆ ಮಾನ್ಯ ಮೊಯಿಲಿಯವರು ರಾಜ್ಯದ ಮುಖ್ಯಮಂತ್ರಿ ಆದಂತಹ ಸಂದರ್ಭದಲ್ಲಿ, ಅವರ ಅವಧಿಯಲ್ಲಿ ಮಲೈ ಮಹದೇಶ್ವರ ಬೆಟ್ಟ ಏನು ಇದೆ, ಅದರ ಸುತ್ತಮುತ್ತಲೂ ಇದ್ದಂತಹ ಏರಿಯಾ ಏನು ಇದೆ ಅಲ್ಲಿ ಈ ಗ್ರಾನೈಟ್ ಉದ್ದಿಮೆಯನ್ನು ಸಂಪೂರ್ಣವಾಗಿ ನಿಲ್ಲಿಸಿದ್ದರು. ನಂತರ ಬಂದಂತಹ ಮುಖ್ಯಮಂತ್ರಿಗಳು ಅವರೂ ಸಹ ಇದಕ್ಕೆ ಅವಕಾಶ ಕೊಟ್ಟಿರಲಿಲ್ಲ. ಆದರೆ ಈ ಎಂ.ಎಂ. ಹಿಲ್‌ನಲ್ಲಿ ಮೊನ್ನೆ ಇದೇ ವರ್ಷದ ಜುಲೈ ತಿಂಗಳಿನಲ್ಲಿ ಗ್ರಾನೈಟ್ ಉದ್ದಿಮೆ ಮತ್ತೆ ಪ್ರಾರಂಭ ಮಾಡಲು ಅವಕಾಶ ನೀಡಲಾಯಿತು. ಹಾಗಾದರೆ ಈ ರೀತಿ ಅವಕಾಶ ಇದ್ದಂತಹ ಸಂದರ್ಭದಲ್ಲಿ ಈ ಗ್ರಾನೈಟ್ ಲಾಬಿ ಹಿಂದೆ ಇದ್ದಂತಹ ವ್ಯಕ್ತಿಗಳು ಇವತ್ತು ವೀರಪ್ಪನ್ ಅವರ ಸಂಪರ್ಕ ಇದ್ದಂತಹವರು ಅವರು ಡಾ: ರಾಜ್‌ಕುಮಾರ್ ಅವರನ್ನು ಕರೆದುಕೊಂಡು ಬಂದರು. ಆದರೆ ಅವರ ಸಂಪರ್ಕ, ಅವರ ಹಿನ್ನೆಲೆ ಇದನ್ನೆಲ್ಲಾ ನೋಡಿದರೆ ನಾವು ಬೆಂಗಳೂರಿನ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಕರ್ನಾಟಕದ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಸಂಪೂರ್ಣವಾದಂತಹ ತನಿಖೆ ಆಗಬೇಕಾಗಿದೆ. ಇವತ್ತು ಯಾರೇ ವ್ಯಕ್ತಿಗಳು ಇರಬಹುದು. ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಒಪ್ಪಿಕೊಳ್ಳೋಣ. ಆದರೆ ಒಂದು ಒಳ್ಳೆಯ ಕೆಲಸ ಮಾಡಿದ್ದಕ್ಕಾಗಿ ಅವರಿಗೆ ನಾವು ಪುರಸ್ಕಾರ ಕೊಡೋಣ ಎಂದು ಹೇಳಿ ಅವರ ಹಿನ್ನೆಲೆ, ಅವರ ನಡತೆ ಎಲ್ಲವನ್ನೂ ಮರೆತು ಬಿಡುವಂತಹದು, ಕ್ಷಮಿಸಿ ಬಿಡುವಂತಹದು ಸರಿಯಲ್ಲ. ಆದರ ಬಗ್ಗೆಯೂ ಸಂಪೂರ್ಣವಾದಂತಹ ತನಿಖೆ ಆಗಲೇಬೇಕಾಗುತ್ತದೆ. ಇದರ ಹಿನ್ನೆಲೆಯಲ್ಲಿ ಏನೇನು

ಮಾಡಿದ್ದಾರೆ? ಇವರ ಹಿನ್ನೆಲೆ ಏನು? ಎಲ್‌ಟಿಟಿಇ ಪರವಾಗಿ ಇದ್ದಾರೋ ಉಗ್ರಗಾಮಿಗಳ ಪರವಾಗಿ ಇದ್ದಾರೋ, ತಮಿಳುನಾಡು ಸೆಪರೇಟಿಸ್ಟ್ ಮೂವ್‌ಮೆಂಟ್ ಅವರ ಪರವಾಗಿದ್ದರೋ? ಇದರ ಬಗ್ಗೆ ಸಂಪೂರ್ಣವಾದಂತಹ ತನಿಖೆ ಆಗಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ವಾಲಂಟರಿಯಾಗಿ ತನಿಖೆಗೆ ಒಂದು ಆಫ್ಞೆ ಮಾಡಿದರೆ ಬಹಳ ಒಳ್ಳೆಯದು. ಹಾಗೆ ಮಾಡಿದರೆ ಅನುಕೂಲ ಆಗುತ್ತದೆ. ಅದಕ್ಕಾಗಿ ಈ ದಿಸೆಯಲ್ಲಿ ಇವತ್ತು ಚಿಂತನೆ ಆಗಬೇಕಾಗುತ್ತದೆ. ಏಕೆಂದರೆ ಏನಾಗುತ್ತದೆ ಎಂದು ನಾವು ಇದರ ಬಗ್ಗೆ ಚಿಂತನೆಯನ್ನು ಮಾಡದೇ ಇದ್ದರೆ, ಇವತ್ತು ನಮ್ಮ ರಾಜ್ಯ ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತಿದೆ, ಅಭಿವೃದ್ಧಿ ಪಥದಲ್ಲಿ ಹೋಗುವ ಬಗ್ಗೆ, ರಾಜ್ಯದ ಒಂದು ಪ್ರಗತಿ, ಒಂದು ಅಭಿವೃದ್ಧಿ ಬಗ್ಗೆ ಪ್ರತಿಪಕ್ಷದವರೂ ಸಹ ಎಲ್ಲ ರೀತಿಯಿಂದ ಸಹಾಯ, ಸಹಕಾರ ಮಾಡುತ್ತಿದ್ದಾರೆ. ರಚನಾತ್ಮಕವಾದಂತಹ ಬೆಂಬಲವನ್ನು ನಾವು ಕೊಡುತ್ತಿದ್ದೇವೆ. ಇವತ್ತು ಐಟಿ ಇನ್‌ಫರ್ಮೇಷನ್ ಟೆಕ್ನಾಲಜಿ ಬಗ್ಗೆ ಇಡೀ ಜಗತ್ತಿಗೆ ಇವತ್ತು ನಮ್ಮ ರಾಷ್ಟ್ರದಲ್ಲಿ ಅತೀ ಹೆಚ್ಚು ಎಕ್ಸ್‌ಪೋರ್ಟ್ ಮಾಡುವಂತಹ ಇಂಡಸ್ಟ್ರಿ ಯಾವುದು ಎಂದರೆ ನಮ್ಮ ಕರ್ನಾಟಕದ ಐಟಿ ಇಂಡಸ್ಟ್ರಿ. ಅದರ ಬಗ್ಗೆ ಇವತ್ತು ನಮಗೂ ಹೆಮ್ಮೆ ಇದೆ. ನಮ್ಮಲ್ಲಿ ಇರುವಂತಹ ಇಂಜಿನಿಯರ್ಸ್ ಇರಬಹುದು; ಇನ್ನಿತರ ಉದ್ದಿಮೆದಾರರು ಇರಬಹುದು. ಶ್ರೀ ನಾರಾಯಣ ಮೂರ್ತಿಯವರು ಇರಬಹುದು ಅಥವಾ ಶ್ರೀ ಅಜೀಂ ಅವರು ಇರಬಹುದು. ಈ ರೀತಿ ಅವರೂ ಸಾಕಷ್ಟು ಐಟಿ ಇಂಡಸ್ಟ್ರಿ ಬೆಳೆಯುವುದಕ್ಕೆ ಇದನ್ನು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅವರು ಕಾಂಟ್ರಿಬ್ಯೂಷನ್ ಮಾಡುತ್ತಿದ್ದಾರೆ. ಬೆಂಗಳೂರಿಗೆ ಇವತ್ತು ಒಂದು ಪ್ರಾಮುಖ್ಯತೆ ಬರುತ್ತಿದೆ. ಕರ್ನಾಟಕಕ್ಕೆ ಒಂದು ಪ್ರಾಮುಖ್ಯತೆ ಇವತ್ತು ಬರುತ್ತಿದೆ. ಮೊನ್ನೆ ಒಂದು ಔಟ್‌ಲುಕ್‌ನಲ್ಲಿ ಒಂದು ಆರ್ಟಿಕಲ್ ಬಂದಿತ್ತು. ಸೆಪ್ಟೆಂಬರ್ 11ನೇ ತಾರೀಖಿನ ಔಟ್‌ಲುಕ್‌ನಲ್ಲಿ ಒಂದು ಆರ್ಟಿಕಲ್ ಬಂದಿದೆ. ನಮ್ಮ ರಾಷ್ಟ್ರದಲ್ಲಿದ್ದಂತಹ ಬೇರೆ ಬೇರೆ ರಾಜ್ಯಗಳ ಪರಿಸ್ಥಿತಿ, ಅದು ಇವತ್ತು ಸಾಮಾಜಿಕವಾಗಿ ಇರಬಹುದು, ಆರ್ಥಿಕವಾಗಿ ಇರಬಹುದು ಮತ್ತು ಈ ಇನ್‌ವೆಸ್ಟ್‌ಮೆಂಟ್ ಮಾಡುವಂತಹ ದೃಷ್ಟಿಯಿಂದ ಇರಬಹುದು. ಇವನ್ನೆಲ್ಲಾ ಕ್ಯಾಲ್‌ಕ್ಯುಲೇಷನ್ ಮಾಡಿ, ಸರ್ವೆ ಮಾಡಿ ಓವರಾಲ್ ರ‍್ಯಾಂಕಿಂಗ್ ಯಾವ್ಯಾವ ರಾಜ್ಯಕ್ಕೆ ಕೊಟ್ಟಿದ್ದಾರೆ ಎಂದು ಹೇಳುತ್ತೇನೆ. ಅದರಲ್ಲಿ ನಮ್ಮ ಕರ್ನಾಟಕ ಹತ್ತನೇ ರ‍್ಯಾಂಕಿನಲ್ಲಿದೆ. ಮೊದಲನೆಯದು ದೆಹಲಿ, ಎರಡನೆಯದು ಗೋವಾ, ಮೂರನೆಯದು ಕೇರಳ, ನಾಲ್ಕನೆಯದು ಪಂಜಾಬ್, ಐದನೆಯದು ಮಹಾರಾಷ್ಟ್ರ, ಆರನೆಯದು ತಮಿಳುನಾಡು, ಏಳನೆಯದು ಹಿಮಾಚಲ್ ಪ್ರದೇಶ್, ಎಂಟನೆಯದು ಗುಜರಾತ್, ಒಂಭತ್ತನೆಯದು ಹರ್ಯಾಣ ಮತ್ತು ಹತ್ತನೆಯ ರ‍್ಯಾಂಕಿಂಗ್ ಕರ್ನಾಟಕದ್ದು. ನಾವು ಆಂಧ್ರಪ್ರದೇಶದ ಬಗ್ಗೆ ಬಹಳ ಮಾತನಾಡುತ್ತೇವೆ. ಆದರೆ ಅದು 12ನೇ ರ‍್ಯಾಂಕಿನಲ್ಲಿದೆ. ನಾವು 10ನೇ ರ‍್ಯಾಂಕಿನಲ್ಲಿದ್ದೇವೆ. ಕಾನೂನು ಮತ್ತು ಸುವ್ಯವಸ್ಥೆಯಲ್ಲಿನ ರ‍್ಯಾಂಕಿಂಗ್ ನೋಡಿದಾಗ, ನಾವು ಮೊದಲ ಐದು ಸ್ಥಾನದಲ್ಲಿಲ್ಲ. ಮೊದಲು ಕೇರಳ, ಹಿಮಾಚಲ ಪ್ರದೇಶ, ಗುಜರಾತ್, ರಾಜಾಸ್ಥಾನ್, ಗೋವಾ ರಾಜ್ಯಗಳಿದ್ದು,

ನಂತರದ ಸ್ಥಾನದಲ್ಲಿ ನಮ್ಮ ರಾಜ್ಯವಿದೆ. ನಮಗೊಂದು ಒಳ್ಳೆಯ ಸುದ್ದಿ ಎಂದರೆ, ಇನ್‌ವೆಸ್ಟ್‌ಮೆಂಟ್ ಕ್ಲೈಮೇಟ್‌ನಲ್ಲಿ, ಐದು ರಾಜ್ಯಗಳಲ್ಲಿ ನಮ್ಮದೂ ಒಂದಿದೆ. ಗುಜರಾತ್, ಪಂಜಾಬ್, ಮಧ್ಯಪ್ರದೇಶ, ಗೋವಾ ಮತ್ತು ಕರ್ನಾಟಕವೆಂದು ಆ ಐದು ರಾಜ್ಯಗಳನ್ನು ಹೆಸರಿಸಲಾಗಿದೆ. ಈ ರೀತಿಯ ವಾತಾವರಣವಿದೆ. ಹೀಗಾಗಿ, ಒಂದು ಒಳ್ಳೆಯ ವಾತಾವರಣವಿದ್ದ ಸಂದರ್ಭದಲ್ಲಿ ರಾಜ್ಯ ಸರ್ಕಾರದ ತಪ್ಪಿರಬಹುದು, ಯಾರದೇ ತಪ್ಪಿರಬಹುದು, ನಾಳೆ ಆ ವಾತಾವರಣ ಕೆಡಬಹುದು. ಬೆಂಗಳೂರನ್ನು ಕ್ರಿಮಿನಲ್ ಸಿಟಿ ಎಂದು ನಿರ್ಮಾಣ ಮಾಡಿದರೆ ಏನು ಮಾಡುವುದು? ಏಕೆಂದರೆ, ರಾಜ್‌ಕುಮಾರ್‌ರವರ ಅಪಹರಣವಾದ ನಂತರದ ಘಟನೆ, ಆ ದಿನಗಳನ್ನು ನಾವು ನೆನಪಿಸಿಕೊಳ್ಳೋಣ. ಬೆಂಗಳೂರಿನಲ್ಲಿ, ಒಂದು ವಾರದಲ್ಲಿ, ಯಾವ ರೀತಿಯ ವಾತಾವರಣವಿತ್ತು? ಕೆಲವೊಂದು ಇಂಡಸ್ಟ್ರಿ, ಇಲ್ಲಿಗೆ ಬರಬೇಕೆಂದು ಮಾಡಿದ್ದವರು ಬೇರೆ ರಾಜ್ಯಗಳಿಗೆ ಹೊರಟುಹೋದರು ಎಂಬ ಸುದ್ದಿಗಳನ್ನು ನಾವು ಕೇಳಿದ್ದೇವೆ. ಸಿನಿಮಾ, ಎಕ್ಸ್‌ಪೋ ಇಂಡಸ್ಟ್ರಿಗೆ ಸಾಕಷ್ಟು ರೆವಿನ್ಯೂ ಕಡಿಮೆಯಾಯಿತು. ಬೇರೆ ಬೇರೆ ರಂಗಗಳಿಂದ ನಮಗೆ ಇನ್ನೂಂ ಕಡಿಮೆಯಾಯಿತು. ನಾವು ಶ್ವೇತ ಪತ್ರವನ್ನುತ್ತೇವೆ, ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಎನ್ನುತ್ತಾರೆಯೋ, ಆ ಸ್ಟೇಟ್‌ಮೆಂಟಿನಲ್ಲಿ ಅವರು ಇವತ್ತು ಅದರ ಬಗ್ಗೆ ಹೇಳಿದ್ದರೆ ಕ್ಲಾರಿಟಿ ಬರುತ್ತಿತ್ತು. ನೂರಾರು, ಸಾವಿರಾರು ಕೋಟಿ ರೂಪಾಯಿಗಳ ರೆವಿನ್ಯೂ ಲಾಸ್ ಆಗಿದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ರಾಜ್ಯ ಸರ್ಕಾರ ಅದರ ಬಗ್ಗೆ ಕ್ಲಾರಿಫೈ ಮಾಡಿದಿದ್ದರೆ, ಜನರಲ್ಲಿ ವಿಶ್ವಾಸ ಮೂಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ಆದರೆ, ಇವತ್ತು ಅದಾಗಲಿಲ್ಲ. ಈ ರೀತಿ ಆತಂಕದ ವಾತಾವರಣವಿದ್ದ ಸಂದರ್ಭದಲ್ಲಿ ಮತ್ತು ನಾನು ಹೇಳಿದ ಹಿನ್ನಲೆಯಲ್ಲಿ, ಉಗ್ರಗಾಮಿಗಳಿಗೆ ಈ ಒಂದು ಬೆಂಗಳೂರು ನೆಲೆಯಾಗಲು ಶುರುವಾದರೆ, ನಾಳೆ ಅದನ್ನು ನಿಯಂತ್ರಿಸುವುದು ಬಹಳ ಕಷ್ಟವಾಗುತ್ತದೆ. ಬಾಂಬೆಯಲ್ಲಿ ನಡೆದ ಘಟನೆಗಳನ್ನು ನಾವು ನೋಡಿದ್ದೇವೆ. ಅಂಡರ್ ಡಾನ್ ಇರುವುದು, ಅಂಡರ್‌ಗ್ರೌಂಡ್ ಕೆಲಸ ನಡೆಯುವುದು, ಇಲ್ಲೀಗಲ್ ಚಟುವಟಿಕೆಗಳು ನಡೆಯುವುದನ್ನು ನಾವು ನೋಡಿದ್ದೇವೆ. ಅದೇ ರೀತಿ, ಬೆಂಗಳೂರಿನಲ್ಲಿಯೂ ಪುನರಾವರ್ತಿ ಆಗಬಾರದೆಂಬುದು ನನ್ನ ಕಳಕಳಿ. ಇದರ ಬಗ್ಗೆ ಸಂಪೂರ್ಣವಾದ ತನಿಖೆಯನ್ನು ನಾವು ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ, ಅದರಿಂದ ಮುಂದಿನ ದಿನಗಳಲ್ಲಿ ಬಹಳಷ್ಟು ತೊಂದರೆಗಳನ್ನು ಅನುಭವಿಸಲು ಸಾಧ್ಯವಿದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಡಾ: ರಾಜ್‌ಕುಮಾರ್‌ರವರ ಅಪಹರಣ ಮತ್ತು ಅದರ ನಂತರದಲ್ಲಿ ಬಂದ ಕೆಲವು ಸ್ಟೇಟ್‌ಮೆಂಟ್‌ಗಳನ್ನು ನಾವು ನೋಡುತ್ತಿದ್ದೇವೆ. ಕೆಲವು ಪತ್ರಿಕೆಗಳಲ್ಲಿ, "ಮಣಿ ಎನ್ನುವ ವ್ಯಕ್ತಿ ಶಿವರಾಜನ್‌ಗೆ ಹೆಲ್ಪ್ ಮಾಡಿದ" ಎಂದು ವರದಿಯಾಗಿದೆ. ಮಾಜಿ ಅರಣ್ಯ ಮಂತ್ರಿಗಳಾದ ಜೀವಿಜಯವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. "ಕಾಡುಗಳ್ಳ ವೀರಪ್ಪನ್‌ಗೆ ಎಲ್‌ಟಿಟಿಇ ಜೊತೆ ಸಂಬಂಧವಿದೆ ಎಂದು 1985ನೇ ಇಸವಿಯಲ್ಲೇ ತಾವು ಗೃಹಸಚಿವರಿಗೆ ಬರೆದ ದಾಖಲೆ ಈಗಲೂ ಇದೆ ಎಂದು ಮಾಜಿ ಅರಣ್ಯ ಸಚಿವ ಜೀವಿಜಯರವರು

ಹೇಳಿದರು" ಎನ್ನುವ ಸುದ್ದಿ ಪ್ರಜಾವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಅವರು ಈ ಮಾತನ್ನು ಮೊನ್ನೆ ಚಿಕ್ಕಮಗಳೂರಿನಲ್ಲಿ ಹೇಳಿದ್ದಾರೆ. ಅವರು ಕೆಲವು ಪ್ರ ವಿಷಯಗಳನ್ನೂ ಇಲ್ಲಿ ಹೇಳಿದ್ದಾರೆ. "ತಮಿಳು ಉಗ್ರಗಾಮಿ ಗುಂಪಿನ ನಂಟಿನಿಂದ ಈಗ ತಮಿಳು ಈಳಂ ಬೇಡಿಕೆ ಈಡೇರುವವರೆಗೆ, ವೀರಪ್ಪನ್ ಬಂಧಿಸುವಲ್ಲಿ ಅರಣ್ಯ ಮತ್ತು ಪೋಲೀಸ್ ಇಲಾಖೆಗಳ ಮಧ್ಯೆ ಸಾಮರಸ್ಯದ ಕೊರತೆಯೇ ಮುಖ್ಯ ಕಾರಣವಾಯಿತು. ವೀರಪ್ಪನ್‌ನನ್ನು ಬಂಧಿಸುವಲ್ಲಿ ಈ ಇಲಾಖೆಗಳ ಮಧ್ಯೆ ಮುಸುಕಿನ ಗುದ್ದಾಟ ನಡೆಯಿತು. ಎಸ್‌ಟಿಎಫ್ ಕೂಡ ಆತನನ್ನು ಸೆರೆ ಹಿಡಿಯಲು ಎಷ್ಟರಮಟ್ಟಿಗೆ ಗಂಭೀರ ಪ್ರಯತ್ನ ಮಾಡಿದೆ ಎಂಬುದು ಅಧ್ಯಯನದಿಂದ ತಿಳಿಯಬೇಕೆಂದೂ ವೀರಪ್ಪನ್ ದುಷ್ಕೃತ್ಯಗಳ ಬಗ್ಗೆ ಅವರು ಎಳೆಎಳೆಯಾಗಿ ವಿವರಿಸಿದರು. 1984-85ರಲ್ಲಿ ನಾಲ್ಕು ತಲೆಗಳನ್ನು ಕಡಿದು ನೇತು ಹಾಕಿದ ಅವನನ್ನು ಹಿಡಿಯಲು ಆಗಿನ ಗೃಹ ಸಚಿವರಾಗಿದ್ದ ಶ್ರೀ ರಾಚಯ್ಯ, ಪೋಲೀಸ್ ಮಹಾ ನಿರ್ದೇಶಕರ ಅನುಮತಿ ಪಡೆದು ಕಂಡಲ್ಲಿ ಗುಂಡಿಕ್ಕಲು ಅರಣ್ಯ ಇಲಾಖಾಧಿಕಾರಿಗಳಿಗೆ ಆದೇಶ ನೀಡಲು ತಿಳಿಸಿದರು ಎಂದು ವರದಿಯಾಗಿದೆ. ಜೀವಿಜಯರವರು 1985ರಲ್ಲಿ ಅರಣ್ಯ ಸಚಿವರಾಗಿದ್ದ ಸಂದರ್ಭದಲ್ಲಿ ಬರೆದ ಪತ್ರಗಳು ದಾಖಲೆಯಲ್ಲಿವೆ. ಯಾರೋ ಒಬ್ಬ ಜನಸಾಮಾನ್ಯ ಸ್ಟೇಟ್‌ಮೆಂಟ್ ಕೊಟ್ಟಿದ್ದಾನೆಂದರೆ, ಅದರ ಬಗ್ಗೆ ನಾವು ಎಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತೇವೆಂಬುದು ಬೇರೆ ವಿಷಯ. ಈ ಕಾರ್ಯಾಚರಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಹಿರಿಯ ಅಧಿಕಾರಿಗಳಿಗದ್ದಾರೆ. ಅವರ ಹೇಳಿಕೆಗಳನ್ನೂ ಪತ್ರಿಕೆಗಳಲ್ಲಿ ನಾವು ನೋಡುತ್ತಿದ್ದೇವೆ. ಎಸ್‌ಟಿಎಫ್ ಮೊದಲನೇ ಸಲ ಶುರುವಾದ ಸಂದರ್ಭದಲ್ಲಿ ಕೋದಂಡರಾಮಯ್ಯನವರೇ ಅದಕ್ಕೆ ಪ್ರಮುಖರಾಗಿದ್ದರೆಂಬ ನೆನಪಿದೆ. ಅವರೊಂದು ಪತ್ರಿಕಾ ಹೇಳಿಕೆ ಕೊಟ್ಟು, ಕೆಲವು ಗಂಭೀರವಾದ ವಿಷಯಗಳನ್ನು ಹೊರಹಾಕಿದ್ದಾರೆ. ಇದನ್ನು ನಾವು ಪತ್ರಿಕೆಯಲ್ಲಿ ಬಂದಿದೆ ಎನ್ನುವ ಒಂದೇ ಕಾರಣಕ್ಕೆ ಗಂಭೀರವಾಗಿ ತೆಗೆದುಕೊಳ್ಳದೇ ಹೋದರೆ, ಕಾನ್ಸಿಕ್ವೆನ್ಸ್ ಅನ್ನು ರಾಜ್ಯದಲ್ಲಿ ಬಹಳ ದೀರ್ಘವಾಗಿ ಅನುಭವಿಸಬೇಕಾಗುತ್ತದೆ. ಕೋದಂಡರಾಮಯ್ಯನವರು ಹೇಳಿದ 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ವರದಿಯಾದ ಒಂದೆರಡು ವಿಷಯಗಳನ್ನು ನಾನು ಮಾನ್ಯ ಅಧ್ಯಕ್ಷರ ಅನುಮತಿ ಮೇರೆಗೆ ಈ ಸದನದ ಗಮನಕ್ಕೆ ತರಬಯಸುತ್ತೇನೆ.

"ಚಾಮರಾಜನಗರ ಜಿಲ್ಲೆಯ ಶಾಸಕರೊಬ್ಬರು, ರಾಜ್ಯದ ಹಾಲಿ ಸಂಸತ ಸದಸ್ಯರೊಬ್ಬರು ಹಾಗೂ ಕರ್ನಾಟಕ, ತಮಿಳುನಾಡಿನ ಹಿರಿಯ ಪೋಲೀಸ್ ಅಧಿಕಾರಿಗಳ ಕೃಪಾಕಟಾಕ್ಷವೇ ಸಾಮಾನ್ಯ ಕಾಡುಗಳ್ಳ ವೀರಪ್ಪನ್ ಉಗ್ರಗಾಮಿಯಾಗಿ ಬೆಳೆಯಲು ಕಾರಣ" ಎಂದು ಹಿರಿಯ ಪೋಲೀಸ್ ಅಧಿಕಾರಿ, ಲೋಕಸಭಾ ಮಾಜಿ ಸದಸ್ಯರಾದ ಕೋದಂಡರಾಮಯ್ಯನವರು ಆರೋಪಿಸಿದ್ದಾರೆ. ಇದು ಬಹಳ ಗಂಭೀರವಾದ ಆಪಾದನೆ. ಇವತ್ತು ಚಾಮರಾಜನಗರ ಜಿಲ್ಲೆಯಲ್ಲಿ ಸಾಕಷ್ಟು ಜನರು ಶಾಸಕರಿದ್ದಾರೆ. ಹಾಲಿ ಶಾಸಕರು ಎನ್ನುವಂಥಾದನ್ನು ಹೇಳಿದ್ದಾರೆ. ಹಿಂದೆ ಕೇಂದ್ರದ ಮಾಜಿ ಸಚಿವರು, ಹಾಲಿ ಸಂಸತ್ ಸದಸ್ಯರು ಎಂದು

ಹೇಳಿದ್ದಾರೆ. ಇದರ ಬಗ್ಗೆ ಇವತ್ತು ಬಹಳ ಗಂಭೀರವಾದ ಚಿಂತನೆಯಾಗಬೇಕಾಗಿದೆ. ನಾವು ಇದನ್ನು ಗಮನಿಸದೇ ಹೋದರೇ, ಯಾರು ವೀರಪ್ಪನ್‌ಗೆ ಹಿಂದೆ ಎನ್‌ಕರೇಜ್, ಸ್ಕೋಪ್ ಕೊಟ್ಟರೋ ತಿಳಿಯಲ್ಲ. ಹಲವು ಸಾರಿ ವೀರಪ್ಪನ್ ವಿಷಯ ಚರ್ಚೆಗೆ ಬಂದ ಸಂದರ್ಭದಲ್ಲಿ ಸಾಕಷ್ಟು ಸಾರಿ ರಾಜಕಾರಣಿಗಳ ಜೊತೆ ಆತನ ನಂಟಿದೆ ಎನ್ನುವ ಆಪಾದನೆ ಇದೆ, ಆದರೆ ಅದಕ್ಕೆ ಗ್ರಾಸ್-ರೂಟ್‌ನಲ್ಲಿ, ಡೀಪ್ ಆಗಿ ಇನ್‌ವೆಸ್ಟಿಗೇಷನ್ ಮಾಡುವುದಾಗಲಿಲ್ಲ. ಅವರು ಮುಂದುವರಿದು, "ಎರಡೂ ರಾಜ್ಯಗಳ ಪೋಲೀಸ್ ಇಲಾಖೆಗಳಲ್ಲಿ ಈಗಲೂ ವೀರಪ್ಪನ್ ಬಗ್ಗೆ ಸಹಾನುಭೂತಿ ಹೊಂದಿರುವವರಿದ್ದಾರೆ. ಇನ್ನೂ 10-20 ವರ್ಷಗಳು ಕಾರ್ಯಾಚರಣೆ ನಡೆಸಿದರೂ ಆತನನ್ನು ಬಂಧಿಸಲು ಸಾಧ್ಯವಿಲ್ಲ, ಬದಲಾಗಿ, ರಾಜ್‌ಕುಮಾರ್ ರವರನ್ನು ಕಾಡಿನಿಂದ ಬಿಡಿಸಿಕೊಂಡು ಬಂದಿರುವ ನೆಡುಮಾರನ್ ಮೂಲಕ ವೀರಪ್ಪನ್ ಶರಣಾಗತಿಗೆ ಕ್ರಮ ಕೈಗೊಳ್ಳುವುದು ಒಳ್ಳೆಯದೆಂದು" ನಿವೃತ್ತ ಹಿರಿಯ ಪೋಲೀಸ್ ಅಧಿಕಾರಿಯಾಗಿರುವ ಕೋದಂಡರಾಮಯ್ಯನವರು ಸುದ್ದಿಗಾರರಿಗೆ ತಿಳಿಸಿದರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. "ಕರ್ನಾಟಕ-ತಮಿಳುನಾಡು ಗಡಿಭಾಗದ ಗ್ರಾನೈಟ್ ಉದ್ಯಮವು ವೀರಪ್ಪನ್ ಬೆಳೆಯಲು ಕಾರಣ. ಅದೇ ಗ್ರಾನೈಟ್ ಲಾಬಿಯಿಂದ ಈಗ ರಾಜ್‌ಕುಮಾರ್‌ರವರು ನರಹಂತಕನ ವಶದಿಂದ ಬಿಡುಗಡೆಯಾಗಿ ಬಂದಿದ್ದಾರೆಂದು ಹೇಳಿದರು. ವೀರಪ್ಪನ್ ಕಾಡಿನಲ್ಲಿ ಗಂಧದ ಮರಗಳನ್ನು ಕದ್ದು ಸಾಗಿಸುತ್ತಿದ್ದ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆಯ ಶಾಸಕರೊಬ್ಬರು ಸಹಾಯ ಪಡೆದಿದ್ದಾರೆ. ಇದೇ ರೀತಿ, ವೀರಪ್ಪನ್, ಶ್ರೀಗಂಧದ ಮರದ ತುಂಡುಗಳನ್ನು ಕೇಂದ್ರದ ಮಾಜಿ ಸಚಿವರಾಗಿರುವ ಹಾಲಿ ಸಂಸತ್ ಸದಸ್ಯರ ಮೂಲಕ ಉತ್ತರ ಭಾರತಕ್ಕೆ ರವಾನಿಸಿದ್ದಾರೆಂದು ಆರೋಪಿಸಿದ್ದಾರೆ. ವೀರಪ್ಪನ್ ವಿರುದ್ಧ ಎಸ್‌ಟಿಎಫ್ ಕಾರ್ಯಾಚರಣೆ ಸಡಿಲಗೊಳಿಸಲು ಕರ್ನಾಟಕ ನಿವೃತ್ತ ಹಿರಿಯ ಪೋಲೀಸ್ ಅಧಿಕಾರಿಯೊಬ್ಬರು ಕಾರಣ. ಅವರ ವೀರಪ್ಪನ್ ಬಗ್ಗೆ ಮೃದ ಧೋರಣೆ ತಳೆದಿದ್ದರು. ಅವರ ಸಂಬಂಧಿಕರು ಈಗ ರಾಜ್‌ಕುಮಾರ್‌ರವರನ್ನು ಬಿಡಿಸಿಕೊಂಡು ಬಂದ ಗ್ರಾನೈಟ್ ಲಾಬಿಯ ಅಂಶವಾಗಿದ್ದಾರೆ" ಎಂದು ತಿಳಿಸಿದ್ದಾರೆ. ಇದು ಗಂಭೀರವಾದ ಆಪಾದನೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳದೇ ಹೋದರೆ, ಇದರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡದಿದ್ದರೆ, ಬಹುಶ: ಇನ್ನು ಮುಂದೆ ಇಂಥ ಘಟನೆಗಳು ನಡೆಯಬಹುದು. ಅದಕ್ಕೆ ಹೇಳುವವರು, ಕೇಳುವವರು ಯಾರೂ ಇಲ್ಲದ ಪರಿಸ್ಥಿತಿ ಬರುತ್ತದೆ. ಈ ರೀತಿ ಪುನರಾವರ್ತಿ ಆಗದ ರೀತಿಯಲ್ಲಿ ಮಾಡಬೇಕು. ಇವತ್ತು ಪತ್ರಿಕೆಯಲ್ಲಿ ಏನು ಹೇಳಿಕೆ ವರದಿಯಾಗಿವೆ, ಅದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ಡಾ: ರಾಜಕುಮಾರ್ ರವರ ಅಪಹರಣವಾಯಿತು, ನಾಳೆ ಮತ್ತೊಬ್ಬ ಹಿರಿಯ ವ್ಯಕ್ತಿಯ, ಮತ್ತೊಬ್ಬ ವಿಐಪಿಯ ಅಪಹರಣವಾಗಬಹುದು, ಇದು ಪುನರಾವರ್ತಿಯಾಗುತ್ತಾ ಹೋಗುತ್ತದೆ. ಇದಕ್ಕೇನು ಮಾಡಬೇಕು? ಅದಕ್ಕಾಗಿ, ಇದರ ಬಗ್ಗೆ ಸಂಪೂರ್ಣವಾದ ಚಿಂತನೆಯಾಗಬೇಕಾಗಿದೆ. ರಾಜ್‌ಕುಮಾರ್‌ರವರು ಬಿಡುಗಡೆಯಾದ ನಂತರ, ಅದರ ಹಿನ್ನಲೆಯಲ್ಲಿ ನೋಡಿದಾಗ, ಬಹುಶ:

ತಮಿಳುನಾಡಿನಲ್ಲಿ ಎಲ್‌ಟಿಟಿಈ ಸಂಪರ್ಕವಿದ್ದವರಿರಬಹುದು, ಉಗ್ರಗಾಮಿಗಳ ಸಂಪರ್ಕವಿದ್ದಿರಬಹುದು, ಕೆಲವೊಂದು ಆರ್ಗನೈಜೇಷನ್‌ಗಳ ಹೆಸರುಗಳು ನಮಗೆ ಗೊತ್ತಾಗುತ್ತಿವೆ. ಇಲ್ಲಿಯವರೆಗೂ, ಈ ಸಂಸ್ಥೆಗಳ ಹೆಸರೇ ಗೊತ್ತಿರಲಿಲ್ಲ. ಟಿಎನ್‌ಎಲ್‌ಎ (ತಮಿಳುನಾಡು ಲಿಬರೇಷನ್ ಆರ್ಮಿ) ಟಿಎನ್‌ಆರ್‌ಟಿ (ತಮಿಳುನಾಡು ರಿಟ್ರೀಲ್ ಟ್ರೂಪ್) ಎಂಬ ಸಂಸ್ಥೆಗಳ ಹೆಸರು ಇವತ್ತು ನಮಗೆ ಗೊತ್ತಾಗುತ್ತಿವೆ. ರಾಜ್‌ಕುಮಾರ್ ಅಪಹರಣವಾದ ನಂತರ, ನೆಡುಮಾರನ್, ಮಾರನ್ ಬಂದ ಮೇಲೆ, ಉಗ್ರಗಾಮಿಗಳ, ಸಂಘಟನೆಗಳ ಹೆಸರು ನಮಗೆ ಗೊತ್ತಾಗುತ್ತಿವೆ. ಅದಕ್ಕಾಗಿ ಇದರ ಬಗ್ಗೆ ನಾವು ಪೂರ್ಣವಾಗಿ ತನಿಖೆ ಮಾಡುವಂಥ ಅವಶ್ಯಕತೆ ಇದೆ. ಇಲ್ಲದಿದ್ದರೆ, ಬಹುಶ: ಏನಾಗುತ್ತದೆ ಅಂದರೆ ರಾಜ್‌ಕುಮಾರ್ ಅವರ ಬಿಡುಗಡೆ ಆಯಿತು, ಎಲ್ಲಾ ಮುಗಿಯಿತು, ನಾವು ಸಂತೋಷದಿಂದ ಇದ್ದೇವೆ, ಯಾರೋ ಒಬ್ಬರು ಹೋಗಿ ಅವರನ್ನು ಕರೆದುಕೊಂಡು ಬಂದರು ನಾವು ಅವರಿಗೆ ಶಹಬಾಶ್‌ಗಿರಿಯನ್ನು ಕೊಟ್ಟೆವು, ಅವರು ಒಳ್ಳೆಯ ಕೆಲಸವನ್ನು ಮಾಡಿದರು, ಹೀಗೆಲ್ಲಾ ನಾವು ಹೇಳಿಕೊಳ್ಳುತ್ತಾ ಹೋದರೆ ಇಂತಹ ಘಟನಾವಳಿಗಳಿಗೆ ಮುಕ್ತಾಯ ಹಾಡುವುದಕ್ಕೆ ಸಾಧ್ಯವಿಲ್ಲ. ಹಿರಿಯ ಪೋಲಿಸ್ ಅಧಿಕಾರಿಯಾಗಿದ್ದ ಶ್ರೀ ಶ್ರೀನಿವಾಸಲು ಅವರು ಇತ್ತೀಚೆಗೆ ನಿವೃತ್ತಿಯಾದರು. ಅದೇ ರೀತಿಯಲ್ಲಿ ರಾಮಲಿಂಗಂ ಇರಬಹುದು, ಅವರ ಸೇವಾ ಅವಧಿಯಲ್ಲಿ ಅವರು ಮಾಡಿದ ಸೇವೆಯ ಬಗ್ಗೆ ಯಾವುದೇ ರೀತಿಯ ತಕರಾರು ಇಲ್ಲ. ಅವರ ರೀತಿ ನೀತಿಗಳನ್ನು ನಾವು ನೋಡಿದಾಗ ಇವತ್ತು ಶ್ರೀನಿವಾಸಲು ಅವರು ರೈನೋ ಸಂಸ್ಥೆಯ ಪ್ರಮುಖರು, ರೈನೋ ಸಂಸ್ಥೆ ಸಾಮಾಜಿಕವಾಗಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಅದರ ಬಗ್ಗೆ ತಕರಾರು ಇಲ್ಲ. ಇವತ್ತು ಡಾಕ್ಟರ್ ಭಾನು ಮತ್ತು ಇನ್ನಿತರರು ಹೋಗಲಿಕ್ಕೆ ಅವರೂ ಪ್ರೇರಣೆ ಕೊಟ್ಟರು ಆಮೇಲೆ ಎಲ್.ಟಿ.ಟಿ.ಇರವರ ಜೊತೆ ಸಹಾನುಭೂತಿ ಮತ್ತು ಈ ವೀರಪ್ಪನ್ ಬಗ್ಗೆ ಸಹಾನುಭೂತಿಯನ್ನು ತೋರಿಸಿದ್ದನ್ನು ನೋಡಿದರೆ ಇದರ ಬಗ್ಗೆ ಕೂಡ ನಾವು ವಿಚಾರಣೆಯನ್ನು ಮಾಡಬೇಕಾಗುತ್ತದೆ. ಈ ರೀತಿಯ ಹೇಳಿಕೆಗಳಿಂದ ಜನರಲ್ಲಿ ಒಂದು ರೀತಿಯ ಗೊಂದಲ ಮಾಡುವುದಕ್ಕೆ ಸಾಧ್ಯವಿದೆ. ನಾವು ಇವತ್ತು ಕಾನೂನು ರಾಜ್ಯದಲ್ಲಿ ಇದ್ದೇವೆಯೋ ಅಥವಾ ಕಾಡಿನ ರಾಜ್ಯದಲ್ಲಿದ್ದೇವೆಯೋ ಎನ್ನುವಂತಹ ಒಂದು ಪ್ರಶ್ನೆಯನ್ನು ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ಸರ್ಕಾರ ಗಂಭೀರ ಚಿಂತನೆಯನ್ನು ಮಾಡಿ ಇದರ ಬಗ್ಗೆ ಒಂದು ತನಿಖೆಯನ್ನು ಮಾಡಬೇಕಾಗುತ್ತದೆ. ಮುಂದೆ ನಾವು ಏನು ಮಾಡಬೇಕು ಎನ್ನುವಂತಹ ಒಂದು ಚಿಂತನೆಯನ್ನು ಮಾಡಬೇಕಾಗುತ್ತದೆ. ಈಗತಾನೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಶ್ರೀ ಸಾಂಗ್ಲಿಯಾನ, ಹಿರಿಯ ಪೋಲೀಸ್ ಅಧಿಕಾರಿ ನೇತೃತ್ವದಲ್ಲಿ ಎಸ್‌ಟಿಎಫ್ ಕಾರ್ಯಾಚರಣೆಗೆ ನಾವು ನಿಯುಕ್ತಿ ಮಾಡಿದ್ದೇವೆಂದು. ಇಲ್ಲಿ ಏನು ಪ್ರಶ್ನೆ ಬರುತ್ತದೆ? ಮಾನ್ಯ ಮುಖ್ಯಮಂತ್ರಿಗಳು ಕರೆದಂತಹ ಸಂದರ್ಭದಲ್ಲಿ ಪ್ರತಿಪಕ್ಷದವರು ನಾವು ಯಾವಾಗಲೂ ಹೇಳುತ್ತಿದ್ದೇವೆ, ಮೊದಲು ಡಾಕ್ಟರ್ ರಾಜ್‌ಕುಮಾರ್ ಅವರ ಬಿಡುಗಡೆಯಾಗಬೇಕು ಅದರ ಬಗ್ಗೆ ಕಾರ್ಯಾಚರಣೆ ಮಾಡಿ, ಅದರ ನಂತರ

ಅವರು ಬಿಡುಗಡೆಯಾಗುತ್ತಾರೆ ಅದರ ತಕ್ಷಣ ವೀರಪ್ಪನ್‌ನ್ನು ಬಂಧನ ಮಾಡುವಂಥಾದನ್ನು ಮಾಡಬೇಕು, ತಾವು ಯಾವುದೇ ರೀತಿಯಲ್ಲಾದರೂ ಅಟ್ಯಾಕ್ ಮಾಡಿ ಎಂದು ನಾವು ಪ್ರತಿ ಹಂತದಲ್ಲಿಯೂ ಹೇಳಿಕೊಂಡು ಬಂದೆವು. ದಿನಾಂಕ 15-11-2000 ದಂದು ಡಾಕ್ಟರ್ ರಾಜ್‌ಕುಮಾರ್ ಬಿಡುಗಡೆಯಾಗಿ ಬಂದರು. ಬಿಡುಗಡೆಯಾಗಿ ಬಂದನಂತರ ಅಲ್ಲಿನ ಘಟನೆಗಳು, ಬಹುಶ: ನನಗನಿಸುತ್ತದೆ 15ನೇ ತಾರೀಖು ಬಿಡುಗಡೆಯಾಗಿ ಬಂದನಂತರ ಕರ್ನಾಟಕ ರಾಜ್ಯ ಸರ್ಕಾರ ಇರಬಹುದು, ತಮಿಳುನಾಡು ಸರ್ಕಾರ ಇರಬಹುದು, ತಕ್ಷಣ ವೀರಪ್ಪನ್ ವಿರುದ್ಧ ಕಾರ್ಯಾಚರಣೆಯನ್ನು ಮಾಡಿದ್ದರೆ ಇವತ್ತು ಬಂಧನದಲ್ಲಿರುತ್ತಿದ್ದ. ಅದು ಆಗಲಿಲ್ಲ. ನಾಲ್ಕು ದಿವಸಗಳವರೆಗೂ ಏಕೆ ತಡವಾಯಿತು? ಯಾವ ರೀತಿ ಕಾರ್ಯಾಚರಣೆ ಮಾಡಬೇಕು ಎನ್ನುವ ಬಗ್ಗೆ ಎಲ್ಲಾ ಪ್ರತಿಪಕ್ಷಗಳನ್ನು ಕರೆದು ಮಾತನಾಡುವಂಥಾದ್ದು ಬೇಕಾಗಿರಲಿಲ್ಲ, ನಾವು ಯಾವಾಗಲೋ ಒಪ್ಪಿಗೆಯನ್ನು ಕೊಟ್ಟಿದ್ದೇವೆ. ಡಾಕ್ಟರ್ ರಾಜ್‌ಕುಮಾರ್ ಈ ಕಡೆ ಬರಬೇಕು, ಆ ಕಡೆ ವೀರಪ್ಪನ್ ಬಂಧನವಾಗಬೇಕು, ಪ್ರತಿಪಕ್ಷದ ಕಡೆಯಿಂದ ಇದರಲ್ಲಿ ಎರಡು ಮಾತು ಇಲ್ಲ. 15ನೇ ತಾರೀಖು ಡಾ: ರಾಜ್‌ಕುಮಾರ್ ಅವರ ಬಿಡುಗಡೆಯಾಯಿತು, ಇದಾದ ನಂತರ ಆ 4-5 ದಿವಸಗಳಲ್ಲಿ ರಾಜ್ಯ ಸರ್ಕಾರ ಏನು ಮಾಡಿತು? ತಮಿಳುನಾಡು ಸರ್ಕಾರ ಏನು ಮಾಡಿತು? ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ಮಾಡಲಾಯಿತೋ ಹೇಗೆ? ಅವರ ವಿರುದ್ಧ ಮುಂದಿನ ಕಾರ್ಯಾಚರಣೆ ಮಾಡಲಾಯಿತೋ ಹೇಗೆ? 15ನೇ ತಾರೀಖು ಡಾಕ್ಟರ್ ರಾಜ್‌ಕುಮಾರ್‌ಅವರ ಬಿಡುಗಡೆಯ ಬಗ್ಗೆ ಸುದ್ದಿಯನ್ನು ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿದಾಗ ಅವರು ನಮಗೆ ಇನ್ನೂ ಅಧಿಕೃತವಾಗಿ ತಿಳಿದಿಲ್ಲ ಎಂದು ಹೇಳಿದರು. ಅಂದರೆ ಅಲ್ಲಿ ಡಾ: ರಾಜ್‌ಕುಮಾರ್ ಅವರ ಬಿಡುಗಡೆಯಾದ ಬಗ್ಗೆ ಒಬ್ಬ ನಂಟನಿಂದ ನಮ್ಮ ನ್ಯೂಸ್ ಏಜನ್ಸಿಯಲ್ಲಿ ಬರುತ್ತದೆ. ಮಾನ್ಯ ಕರುಣಾಮಿಧಿಯವರು ಹೇಳುತ್ತಾರೆ. ಡೆಲ್ಲಿಯಲ್ಲಿ ಮಾನ್ಯ ಪ್ರಧಾನ ಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿಯವರು ಒಂದು ಸಭೆಯಲ್ಲಿದ್ದಾಗ ಅವರು 11-30 ಗಂಟೆಗೆ ನ್ಯೂಸ್ ಕೊಡುತ್ತಾರೆ. ಡಾಕ್ಟರ್ ರಾಜ್‌ಕುಮಾರ್ ಅವರ ಬಿಡುಗಡೆಯಾಗಿದೆ ಎಂದು ಹೇಳಿ ನಮ್ಮ ಮುಖ್ಯಮಂತ್ರಿಗಳಿಗೆ ನಮ್ಮ ರಾಜ್ಯ ಸರ್ಕಾರಕ್ಕೆ ಆ ನ್ಯೂಸ್ ಬರಲಿಲ್ಲ. ನಾವು ಈ ಬಗ್ಗೆ ಸಾಕಷ್ಟು ಕೇಳಿದಾಗ ಮಧ್ಯಾಹ್ನ 2-30 ಗಂಟೆಗೆ ಆ ನ್ಯೂಸ್ ಹೊರಗಡೆ ಬಂತು. ಅಂದರೆ ಎಲ್ಲಿ ತಪ್ಪುಗಳು ಆಗುತ್ತಿವೆ ಎನ್ನುವ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಇದರ ಬಗ್ಗೆ ಒಂದು ತನಿಖೆ ಆಗಬೇಕಾಗುತ್ತದೆ. ಇವತ್ತು ಸಾಂಗ್ಲಿಯಾನರವರನ್ನು ನೇಮಕ ಮಾಡಿದರು. ಅವರು ಒಬ್ಬ ಒಳ್ಳೆಯ ಅಧಿಕಾರಿ, ಅವರ ನೇತೃತ್ವದಲ್ಲಿ ಈ ಎಸ್.ಟಿ.ಎಫ್ ಕಾರ್ಯಾಚರಣೆ ಯಶಸ್ವಿಯಾಗಿ ನಡೆಯಲಿ, ವೀರಪ್ಪನ್ ಬಂಧನ ಆದಷ್ಟು ಬೇಗ ಆಗಲಿ. ಅದರ ಬಗ್ಗೆ ಪ್ರಶ್ನೆ ಇಲ್ಲ. ಆದರೆ ಇವತ್ತು ನನಗೆ ಒಂದು ಸಂಶಯ ಇದೆ. ಡಾಕ್ಟರ್ ರಾಜ್‌ಕುಮಾರ್ ಅವರ ಬಿಡುಗಡೆ 14ನೇ ತಾರೀಖು ರಾತ್ರಿಯೇ ಆಗಿದೆ, 15ನೇ ತಾರೀಖು ನಮಗೆ ಅಧಿಕೃತವಾಗಿ ಗೊತ್ತಾಗಿದ್ದು. ಇವತ್ತು ನಾವು 21ನೇ ತಾರೀಖಿನಲ್ಲಿದ್ದೇವೆ. ಇವತ್ತು ವೀರಪ್ಪನ್ ತನ್ನ ಜೀವ ರಕ್ಷಣೆ ಮಾಡಿಕೊಂಡು ತದನಂತರ ಡಾಕ್ಟರ್ ರಾಜಕುಮಾರ್ ಅವರನ್ನು ಬಿಡುಗಡೆ

ಮಾಡುತ್ತಾನೆ ಎನ್ನುವುದು ಜನರ ಭಾವನೆ. ಅವನು ಹಾಗೆ ಮಾಡಿಕೊಂಡಿದ್ದಾನೆ. ಅವನ ರಕ್ಷಣೆ ಮಾಡಿಕೊಂಡು ಡಾಕ್ಟರ್ ರಾಜ್‌ಕುಮಾರ್ ಅವರನ್ನು ಬಿಡುಗಡೆ ಮಾಡಿದ್ದಾನೆ. ಇವತ್ತು ವೀರಪ್ಪನ್ ವಿರುದ್ಧ ನಾವು ಕಾರ್ಯಾಚರಣೆಯನ್ನು ಮಾಡುತ್ತೇವೆಂದು ನಮ್ಮ ರಾಜ್ಯ ಸರ್ಕಾರ ಸಹ ಘೋಷಣೆ ಮಾಡಿದೆ. ನಾವು ಕಾರ್ಯಾಚರಣೆ ಮಾಡುತ್ತೇವೆಂದು ತಮಿಳುನಾಡು ಸರ್ಕಾರದ ಕರುಣಾನಿಧಿಯವರು ಸಹ ಘೋಷಣೆ ಮಾಡಿದ್ದಾರೆ. ಇವತ್ತು ವೀರಪ್ಪನ್ ಅರಣ್ಯದಲ್ಲಿ ಇದ್ದಾನೆಯೋ ಅಥವಾ ಇಲ್ಲವೋ ಎನ್ನುವ ಸಂಶಯ ನನಗೆ ಬರುತ್ತಿದೆ. ಸುಲ್ಲು ದಿವಸಗಳಮೇಲೆ ಅವನು ಅಲ್ಲಿ ಇರುವುದಕ್ಕೆ ಸಾಧ್ಯವೇ? ಎರಡೂ ಸರ್ಕಾರಗಳು ಅಟ್ಯಾಕ್ ಮಾಡುತ್ತವೆ, ನನ್ನನ್ನು ಬಂಧನ ಮಾಡುತ್ತಾರೆಂದು ಅವನಿಗೂ ಗೊತ್ತಿದೆ. ಈ ಸಂದರ್ಭದಲ್ಲಿ ಅವನು ಅರಣ್ಯದಲ್ಲಿರುವುದಕ್ಕೆ ಸಾಧ್ಯವೇ? ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಏನಾದರೂ ಮಾಹಿತಿ ಇದೆಯೇ? ಬಹುಶ: ಇಲ್ಲದಿದ್ದರೆ ಹೇಗೆ? ಇವತ್ತು ಸಾಂಗ್ಲಿಯಾನ ಇರಬಹುದು ಇನ್ನಿತರ ಪ್ರಬಲ ಅಧಿಕಾರಿ ಇರಬಹುದು, ಅಥವಾ ಕೇಂದ್ರ ಸರ್ಕಾರದ ಕಮ್ಯಾಂಡೋ ಫೋರ್ಸ್ ಇರಬಹುದು, ಯಾವುದೇ ರೀತಿಯ ಫೋರ್ಸ್ ತಂದರೂ ಸಹ ಅಲ್ಲಿ ವೀರಪ್ಪನ್ ಇಲ್ಲದಿದ್ದರೆ ನೀವು ಯಾರ ಮೇಲೆ ಅಟ್ಯಾಕ್ ಮಾಡುತ್ತೀರಿ? ಅವನು ಬಹುಶ: ಈ ದೇಶ ಬಿಟ್ಟು ಹೋಗಿದ್ದಾನೆ, ಅವನು ಶ್ರೀಲಂಕ ದೇಶಕ್ಕೆ ಹೋಗಿದ್ದಾನೆ ಎನ್ನುವಂಥಾದ್ದು ಇದೆ. ಹಾಗಾದರೆ ಅವನು ಶ್ರೀಲಂಕಾಕ್ಕೆ ಹೋಗಿದ್ದಾನೋ ಅಥವಾ ಫಾರೆಸ್ಟ್‌ನಲ್ಲಿಯೇ ಇದ್ದಾನೆಯೋ, ಅದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಖಚಿತವಾದ ಮಾಹಿತಿ ಏನಾದರೂ ಇದೆಯೇ? ಇವತ್ತು ವೈಜ್ಞಾನಿಕತೆ ಬೆಳೆದಿದೆ, ತಾಂತ್ರಿಕತೆ ಬೆಳೆದಿದೆ. ಅವನು ಅಲ್ಲಿ ಇದ್ದಾನೋ ಇಲ್ಲವೋ ಎನ್ನುವ ಚಟುವಟಿಕೆಗಳನ್ನು ಗಮನಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ? ನಾವು ಇದರ ಬಗ್ಗೆ ಮೊದಲಿನಿಂದಲೂ ರಾಜ್ಯ ಸರ್ಕಾರಕ್ಕೆ ಹೇಳುತ್ತಿದ್ದೇವೆ, ಕೇಂದ್ರ ಸರ್ಕಾರದ ನೆರವು ತೆಗೆದುಕೊಳ್ಳಿ ಎಂದು. ಮಾನ್ಯ ಗೃಹ ಸಚಿವರಾದ ಅದ್ವಾನಿಯವರು ಇದರ ಬಗ್ಗೆ ಸಾಕಷ್ಟು ಸಹಕಾರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ಇದರ ಬಗ್ಗೆ ಪ್ರಧಾನ ಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿಯವರು ಸಾಕಷ್ಟು ಪ್ರೋತ್ಸಾಹ, ಸಹಕಾರ ಕೊಡುತ್ತೇನೆಂದು ಹೇಳಿದ್ದಾರೆ. ನಾವು ಎಲ್ಲಾ ರೀತಿಯ ನೆರವು ಕೊಡುವುದಕ್ಕೆ ತಯಾರಾಗಿದ್ದೇವೆಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಮೊದಲು ತಾವು ವೀರಪ್ಪನ್ ಕಾಡಿನಲ್ಲಿ ಇದ್ದಾನೆಯೋ ಇಲ್ಲವೋ ಎನ್ನುವುದನ್ನು ತಿಳಿದುಕೊಳ್ಳಬೇಕು. ಆಮೇಲೆ ಕಾರ್ಯಾಚರಣೆ, ಇಲ್ಲದಿದ್ದರೆ ಇದರಿಂದ ಏನೂ ಉಪಯೋಗವಾಗುವುದಿಲ್ಲ. ಈಗಾಗಲೇ ನಾವು 20 ಕೋಟಿ ರೂಪಾಯಿಗಳನ್ನು ಕಳೆದುಕೊಂಡಿದ್ದೇವೆ. ಇನ್ನು ನಾವು 5-6 ಕೋಟಿ ರೂಪಾಯಿಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಇದರ ಬಗ್ಗೆ ತಾವು ಸರಿಯಾದ ಮಾಹಿತಿಯನ್ನು ತೆಗೆದುಕೊಳ್ಳಬೇಕು ಅದರ ನಂತರ ಕಾರ್ಯಾಚರಣೆ. ಅದರ ಬಗ್ಗೆ ತಯಾರಿ ಇರಲಿ, ಮೊದಲು ಅವನು ಅಲ್ಲಿ ಇದ್ದಾನೋ ಇಲ್ಲವೋ ತಿಳಿದುಕೊಳ್ಳಬೇಕು. ಇಷ್ಟಾದ ಮೇಲೆ ನಮಗೆ ಕೆಲವೊಂದು ಸಂಶಯಗಳು ಬರುತ್ತವೆ. ಡಾಕ್ಟರ್ ರಾಜ್‌ಕುಮಾರ್ ಅವರ ಬಿಡುಗಡೆ ಆಗಿದೆ. ಗೋಪಾಲ್ ಹಲವಾರು ಸಲ ಪ್ರಯತ್ನಪಟ್ಟರೂ ಆಗಲಿಲ್ಲ,

ನಾವು ಎಷ್ಟು ಕಠಿಣ ಎಂದು ತಿಳಿದುಕೊಂಡಿದ್ದೆವು ಅಷ್ಟು ಸುಲುಭವಾಗಿ ಈ ಕೆಲಸ ಆಯಿತು. ಡಾಕ್ಟರ್ ರಾಜ್‌ಕುಮಾರ್ ಅವರ ಬಿಡುಗಡೆಯಾಗಿ ಬಂದ ಮರುದಿವರಸವೇ ಮಾನ್ಯ ಕರುಣಾನಿಧಿಯರು ಒಂದು ಸ್ಟೇಟ್‌ಮೆಂಟ್ ಮತ್ತು ನೆಡುಮಾರನ್ ಅವರು ಒಂದು ಹೇಳಿಕೆಯನ್ನು ಕೊಟ್ಟರು. ನಾವು ವೀರಪ್ಪನ್‌ನ ಕೆಲವೊಂದು ಷರತ್ತುಗಳನ್ನು ಒಪ್ಪಿಕೊಂಡಿದ್ದೇವೆ. ಆ ಷರತ್ತುಗಳಿಗೆ ಒಪ್ಪಿ ಡಾಕ್ಟರ್ ರಾಜ್‌ಕುಮಾರ್ ಅವರನ್ನು ಬಿಡುಗಡೆ ಮಾಡಿದ್ದಾನೆಂದು ಹೇಳಿದ್ದಾರೆ. ಶ್ರೀ ನೆಡುಮಾರನ್ ಎಲ್ಲಿಯವರೆಗೂ ಹೇಳಿದರು ಅಂದರೆ ವೀರಪ್ಪನ್ ವಿರುದ್ಧ ಕಾರ್ಯಾಚರಣೆ ಬೇಡ ಎಂದು ಹೇಳಿದ್ದಾರೆ. ಇದರ ಬಗ್ಗೆ ರಾಜ್ಯ ಸರ್ಕಾರದ ನಿಲುವು ಏನು? ಅವರ ಷರತ್ತುಗಳನ್ನು ಪೂರೈಸಿದ್ದೀರೋ ಏನೋ, ಈಗ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟ ಹೇಳಿಕೆಯಲ್ಲಿ ವೀರಪ್ಪನ್ ಷರತ್ತು, ಮತ್ತು ಅದಕ್ಕೆ ಉತ್ತರ, ಮತ್ತು ಸರ್ಕಾರ ತೆಗೆದುಕೊಂಡ ಕಾರ್ಯಕ್ರಮದ ಬಗ್ಗೆ ಹೇಳಿದರು. ಅದರ ಬಗ್ಗೆ ನಮ್ಮದೇನೂ ಅಡ್ಡಿ ಇಲ್ಲ. ಈಗ ತಾವು ಏನು ಪ್ರಕಟ ಮಾಡಿದಿರಿ ಅದನ್ನು ಬಿಟ್ಟು. ತಾವಾಗಲಿ ಅಥವಾ ಕರುಣಾನಿಧಿಯವರು ಆಗಲಿ ಏನಾದರೂ ಷರತ್ತುಗಳಿಗೆ ಒಪ್ಪಿದ್ದೀರಾ ಅಥವಾ ಇಲ್ಲವೇ? ಅವನು ಹಾಕಿರುವ ಕೆಲವು ಷರತ್ತುಗಳಿಗೆ ಒಪ್ಪಿಕೊಂಡು ರಾಜ್‌ಕುಮಾರ್ ಅವರನ್ನು ಕರೆದುಕೊಂಡು ಬಂದಿದ್ದೀರಾ ಹೇಗೆ? ಇದರಲ್ಲಿ ನೆಡುಮಾರನ್ ಅವರು ಏನಾದರೂ ಷರತ್ತು ಹಾಕಿದ್ದಾನೆಯೇ? ಇವತ್ತು ಇಡೀ ರಾಜ್ಯದಲ್ಲಿ ಒಂದು ಭಾವನೆ ಇದೆ. ವೀರಪ್ಪನ್ ಕಂಡೀಷನ್ಸ್‌ಗೆ ಒಪ್ಪಿ ರಾಜ್‌ಕುಮಾರ್ ಅವರನ್ನು ಬಿಡಿಸಿಕೊಂಡು ಬಂದಿದ್ದಾರೆ ಎಂದು ಮತ್ತು ಇನ್ನೂ ಒಂದು ವದಂತಿ ಇದೆ. ವೀರಪ್ಪನ್‌ಗೆ ಸಾಕಷ್ಟು ಹಣ ಕೊಟ್ಟಿದ್ದಾರೆಂದು, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಿರಾಕರಣೆ ಮಾಡಿದ್ದಾರೆ. ನಾವು ಒಂದು ಪೈಸೆ ಹಣ ಕೊಟ್ಟಿಲ್ಲ ಎಂದು. ಒಳಗಿನ ವಾತಾವರಣದಲ್ಲಿ ಕೋಟ್ಯಾಂತರ ರೂಪಾಯಿಗಳ ಹಣ ವೀರಪ್ಪನ್‌ಗೆ ಮುಟ್ಟಿಸಲಾಗಿದೆ, ಅದಕ್ಕೆ ಬಿಡುಗಡೆ ಮಾಡಿದ್ದಾನೆ ಎನ್ನುವ ವದಂತಿ ಇದೆ. ಇದರ ಬಗ್ಗೆ ರಾಜ್ಯ ಸರ್ಕಾರ ಕ್ಲಾರಿಫೈ ಮಾಡಬೇಕು.

ಅಧ್ಯಕ್ಷರು :— ಈಗ ಸಭೆಯನ್ನು ಮುಂದೂಡಿ ಮತ್ತೆ ಸಭೆಯು 3-00 ಗಂಟೆಗೆ ಸೇರುವುದು.

(ಸಭೆಯು 1-59 ಗಂಟೆಗೆ ಮುಗಿಯಿತು)

(ಸದನವು ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಪುನರ್ ಸಮಾವೇಶಗೊಂಡಿತು. ಅಧ್ಯಕ್ಷ ಪೀಠದಲ್ಲಿ ವಿಧಾನ ಸಭಾಧ್ಯಕ್ಷರಾದ ಶ್ರೀ ಎಂ.ವಿ. ವೆಂಕಟಪ್ಪನವರು ಉಪಸ್ಥಿತರಿದ್ದರು)

ಅಧ್ಯಕ್ಷರು :— ಈಗ ಮೊದಲು ಎರಡು ವಿಧೇಯಕಗಳನ್ನು ಸದನದಲ್ಲಿ ಮಂತ್ರಿಗಳು ಮಂಡಿಸಲಿ. ಇದಾದನಂತರ ವೀರಪ್ಪನ್ ಬಗ್ಗೆ ಮುಂದುವರಿದ ಚರ್ಚೆ ನಡೆಯಲಿ. ಈ ವಿಷಯದ ಚರ್ಚೆ ಇಂದು ಸಂಜೆ 5 ಗಂಟೆ 30 ನಿಮಿಷದೊಳಗೆ ಮುಗಿಯಬೇಕು.